PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

ಸಧೃಡತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

E NAMMA DHURTHI NEWS KANNADA DAILY NEWS PAPER

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ ಸಂಪುಟ: 01 ಸಂಚಿಕೆ: 175 ಪುಟಗಳು: 04 ಬೆಲೆ: 02 ದಿನಾಂಕ: 28-08-2026 ಶುಕ್ರವಾರ email: enammadhruthinews@gmail.com Pho : 7353595904

## ಕೇಸೂರ್ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ಗ್ರಾಮಸ್ಥರಿಗೆ ನೀರಿನ ಸಮಸ್ಯೆ



**ಧೃತಿ ನ್ಯೂಸ್ ಸುದ್ದಿ**

ದೋಟಿಹಾಳ: ಕೇಸೂರ್ ಗ್ರಾಮದ ಜನರಿಗೆ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಗಿದ್ದ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ಹೋಗಿರುವುದರಿಂದ ಗ್ರಾಮಸ್ಥರು ತೊಂದರೆ ಅನುಭವವಿಸುತ್ತಿದ್ದಾರೆ.

ತ್ವರಿತವಾಗಿ ದುರಸ್ತಿ ಮಾಡದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಘಟಕವನ್ನು ಅವಲಂಬಿಸಿರುವ ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಶುದ್ಧ ನೀರಿನ ಘಟಕವೂ ಸ್ಥಗಿತಗೊಂಡಿರುವುದು ಸಮಸ್ಯೆಯನ್ನು. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಕೂಡಲೇ ಘಟಕವನ್ನು ಪರಿಶೀಲಿಸಿ ಅಗತ್ಯ ದುರಸ್ತಿ ಕಾರ್ಯ ಕೈಗೊಂಡು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಜನರ ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರು ಅತ್ಯಂತ ಅಗತ್ಯವಾಗಿದ್ದು, ಘಟಕದ ನಿರ್ವಹಣೆಗೆ ಶಾಶ್ವತ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಮುಂದೆ ಪದೇಪದೇ ದೋಷ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಹೋಟೆಲ್‌ಗಳ ತಪಾಸಣೆ ಕಡ್ಡಾಯ : ಜಿಲ್ಲಾಧಿಕಾರಿ

**ಧೃತಿ ನ್ಯೂಸ್ ಸುದ್ದಿ**

ಕೊಪ್ಪಳ: ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಜಿಲ್ಲೆಯ ಎಲ್ಲ ಹೋಟೆಲ್‌ಗಳು, ಖಾನಾವಳಿ, ಬೀದಿಬದಿ ಆಹಾರ ಬಂಡಿಗಳು ಸೇರಿದಂತೆ ಆಹಾರ ಉತ್ಪಾದನಾ ಮತ್ತು ಮಾರಾಟ ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿ, ಪರಿಶೀಲನೆ ನಡೆಸುವುದು ಕಡ್ಡಾಯ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಗಸ್ಟ್ 25 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಧಿಕಾರಿಗಳು ಆಗಾಗ ಜಿಲ್ಲೆಯ ದೊಡ್ಡ ಹೋಟೆಲ್ ಗಳಿಂದ ಬೀದಿ ಬದಿ ಮಾರುವ ಪಾನಿಪೂರಿ, ಗೋಬಿ, ಎಗ್ರೈಸ್ ಮುಂತಾದ ಆಹಾರ ಬಂಡಿಗಳಲ್ಲಿ ನೀಡುವ ಆಹಾರಗಳ ಗುಣಮಟ್ಟ, ಸ್ವಚ್ಛತೆ ಪರಿಶೀಲಿಸಬೇಕು. ಆಹಾರ ಮಾತ್ರವಲ್ಲದೆ ಆಹಾರಕ್ಕೆ ಬಳಸುವ ಸಾಮಗ್ರಿ, ಅವುಗಳ ಬಳಕೆ ಯೋಗ್ಯದ ದಿನಾಂಕ, ಅವಧಿ ಮುಕ್ತಾಯದ ದಿನಾಂಕ, ಅದರಲ್ಲಿರುವ ಸುರಕ್ಷಿತ ಆಹಾರ ತಯಾರಿಕಾ ಅಂಶಗಳು, ಬಳಸುವ ಎಣ್ಣೆ, ಅಡುಗೆಗೆ ಬಳಸುವ ಬಣ್ಣ, ಅಡುಗೆ ಮನೆ, ಸ್ಟೋರ್ ರೂಂ ಸ್ವಚ್ಛತೆ, ಅಡುಗೆ ಕಾರ್ಮಿಕರ ಸ್ವಚ್ಛತೆ ಮುಂತಾದವುಗಳನ್ನು



ಪರಿಶೀಲಿಸಬೇಕು. ಹೋಟೆಲ್ ಅಥವಾ ಆಹಾರ ಉತ್ಪದನಾ, ಮಾರಾಟ ಅಂಗಡಿಗಳು ಸರ್ಕಾರದಿಂದ ನಿಷೇಧಿಸಲ್ಪಟ್ಟ ಯಾವುದೇ ಸಾಮಗ್ರಿಯನ್ನು ಅಡುಗೆಗೆ ಬಳಸುವಂತಿಲ್ಲ ಹಾಗೂ ಮಿತಿ ಮೀರಿದ ಬಳಕೆ ಮಾಡುವಂತಿಲ್ಲ. ಈ ವಿಷಯದಲ್ಲಿ ಯಾವುದೇ ಒತ್ತಡಕ್ಕೆ ಒಳಗಾಗದೆ ಪಾರದರ್ಶಕ ಕರ್ತವ್ಯ ನಿರ್ವಹಿಸಬೇಕು. ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಇಂತಹ ಕಠಿಣ ಕ್ರಮಗಳು ಅನಿವಾರ್ಯ ಎಂದು ಅವರು ಹೇಳಿದರು. ಇದಲ್ಲದೆ, ಕಿರಾಣಿ ಅಂಗಡಿಗಳು, ಸೂಪರ್ ಮಾರ್ಕೆಟ್‌ಗಳಲ್ಲಿನ ಆಹಾರ ಸಾಮಾಗ್ರಿಗಳ ಪರಿಶೀಲನೆ ನಡೆಸಬೇಕು. ಎಲ್ಲ ಪ್ಯಾಕಿಂಗ್ ಉತ್ಪನ್ನಗಳ ಮೇಲಿನ ವಿವರಗಳನ್ನು ಪರಿಶೀಲಿಸಬೇಕು. ಅವಧಿ ಮೀರಿದ ಉತ್ಪನ್ನಗಳು, ನಿಷೇಧಿತ ವಸ್ತು ಬಳಸಿದ ಉತ್ಪನ್ನಗಳು, ಮಕ್ಕಳ ತಿನಿಸುಗಳು ಮುಂತಾದವುಗಳನ್ನು ಕಡ್ಡಾಯವಾಗಿ ನಿಯಮಾನುಸಾರ ಪರಿಶೀಲಿಸಬೇಕು. ತಪ್ಪು ಕಂಡುಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಮಾಂಸಾಹಾರಿ ಹೋಟೆಲ್‌ಗಳಲ್ಲಿ ಕೊಳೆತ ಅಥವಾ ಬಳಕೆಗೆ ಯೋಗ್ಯವಲ್ಲದ ಮಾಂಸವನ್ನು ಬಳಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಯಾವುದೇ ರಾಜೀ ಇಲ್ಲದೆ ಜಿಲ್ಲೆಯ ಎಲ್ಲ ಸಣ್ಣ ಕಿರಾಣಿ ಅಂಗಡಿಗಳಿಂದ ದೊಡ್ಡ ಸೂಪರ್ ಮಾರ್ಕೆಟ್‌ಗಳ ವರೆಗೆ ಹಾಗೂ ಬೀದಿ ಬದಿ ಪಾನಿಪೂರಿ ಅಂಗಡಿಯಿಂದ ದೊಡ್ಡ ಪ್ರಮುಖ ಹೋಟೆಲ್‌ಗಳ ವರೆಗೆ ಅಧಿಕಾರಿಗಳು ಕಡ್ಡಾಯವಾಗಿ ದಾಳಿ ಮಾಡಿ, ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ತಪ್ಪಿತಸ್ಥ ಹೋಟೆಲ್‌ಗಳನ್ನು ಬಂದ್ ಮಾಡಿಸಿ, ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಆರೋಗ್ಯವೇ ನಮ್ಮ ಆದ್ಯತೆ ಆಗಿರಬೇಕು ಎಂದು ಅವರು ತಿಳಿಸಿದರು. ಕಲುಷಿತ ಆಹಾರ, ನೀರು, ನಿಯಮ ಬಾಹಿರ ಆಹಾರ ಸಾಮಗ್ರಿ ಬಳಕೆ ಕಂಡುಬಂದಲ್ಲಿ ಅವುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ, ಸೂಕ್ತ ವರದಿಯೊಂದಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಬೇಕರಿಗಳಲ್ಲಿಯೂ ತಪಾಸಣೆ ನಡೆಸಬೇಕು. ಮಕ್ಕಳ ಸಿಹಿ ತಿನಿಸು, ಕ್ಯಾಂಡಿ, ಚಾಕೋಲೆಟ್‌ಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಪ್ರಯೋಗಾಲಯಕ್ಕೆ ಕಳುಹಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಅಂಕಿತ ಅಧಿಕಾರಿ ಮಹಮ್ಮದ್ ಜೀಲಾನಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಈಶ್ವರ ಸವಡಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪ್ರಕಾಶ ವಿ., ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ ಎಂ.ಎಚ್., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಪ್ರಕಾಶ ಎಚ್., ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಗೋನಾಳ ಕುಮಾರಸ್ವಾಮಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತಗೌಡ ಹಿರೇಗೌಡ್ರ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ತಾಲ್ಲೂಕುಗಳ ಆರೋಗ್ಯಾಧಿಕಾರಿಗಳು, ಕೊಪ್ಪಳ ಕಿಮ್ಸ್ ತಜ್ಞ ವೈದ್ಯರು, ವಿವಿಧ ಆರೋಗ್ಯ ಸಂಸ್ಥೆಗಳ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ದಮ್ಮೂರ ಗ್ರಾಮದಲ್ಲಿ ಭಾವೈಕ್ಯತೆಯಿಂದ ಈದ್ ಮಿಲಾದ್ ಆಚರಣೆ

**ಧೃತಿ ನ್ಯೂಸ್ ಸುದ್ದಿ**

ದಮ್ಮೂರ: ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸುವ ಪವಿತ್ರ ಈದ್ ಮಿಲಾದ್ ಹಬ್ಬವನ್ನು ದಮ್ಮೂರ ಗ್ರಾಮದಲ್ಲಿ ಹಿಂದೂ?ಮುಸ್ಲಿಂ ಭಾವೈಕ್ಯತೆ ಹಾಗೂ ಸೌಹಾರ್ದತೆಯೊಂದಿಗೆ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಗ್ರಾಮದಲ್ಲಿ ನಡೆದ ಈದ್ ಮಿಲಾದ್ ಕಾರ್ಯಕ್ರಮವು ಧರ್ಮದ ಗಡಿಗಳನ್ನು ಮೀರಿ ಪರಸ್ಪರ ಪ್ರೀತಿ, ಸಹೋದರತ್ವ ಮತ್ತು ಸಾಮರಸ್ಯದ ಸಂದೇಶ ಸಾರಿತು. ಕಾರ್ಯಕ್ರಮದಲ್ಲಿ ಜಾತಿ ಮತ ಪಂಥಗಳ ಎಲ್ಲೆಮೀರಿ ವಿವಿಧ ಸಮುದಾಯಗಳ ಮುಖಂಡರು, ಹಿರಿಯರು, ಯುವಕರು ಹಾಗೂ ಮಕ್ಕಳು ಭಾಗವಹಿಸಿ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಭಾವೈಕ್ಯತೆ ಸದಾ ನೆಲೆಸಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಇದೆ ಸಂದರ್ಭದಲ್ಲಿ ಜಾಮಿಯಾ ಮಸೀದಿಯ ಇಮಾಮ್ ಹಜರತ್ ರಾಶಿದ್ ಖಾಜಿ, ಯವರ ಮುಂದಾಳತ್ವದಲ್ಲೀ ಅಶ್ರಫೀ ಅರಬ್ಬೀ ಮೊದಲಾದ ಮಕ್ಕಳು & ಗ್ರಾಮದ ಹಿರಿಯರು ದಮ್ಮೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಪ್ರವಾದಿಯವರ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನೆಡೆಸಲಾಯಿತು ಈ ಸಂದರ್ಭದಲ್ಲಿ ಹನಮಂತಪ್ಪಜ್ಜ ಧರ್ಮರ, ಡಿ. ಮೌನೇಶ್ ಬಡಿಗೇರ, ಶರಣಯ್ಯ ಹಿರೇಮಠ, ಶರಣಗೌಡ ಸಕ್ರಗೌಡ್ರ, ಮೌಲಪ್ಪ ರಾಟೋಡ್, ರಸೂಲಸಾಬ ಹಿರೇಮನಿ, ಅಲ್ಲಾಸಾಬ ವಾಲಿಕಾರ, ಇಬ್ರಾಹಿಂಸಾಬ ವಾಲಿಕಾರ, ಬಾಪೂಸಾಬ ಕುಷ್ಟಗಿ, ಈರಪ್ಪ ಅಜ್ಜನವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅದೇ ರೀತಿ ಹುಸೇನ್ ಸಾಬ್ ಕುಷ್ಟಗಿ, ಬುಡನ್ ಸಾಬ್, ರಾಜೇಸಾಬ್, ಫಕೀರಸಾಬ್, ಅಲ್ಲಾಭಕ್ಷಿ, ಖಾಜಾಸಾಬ್, ಖಾಸಿಂಸಾಬ್, ಶ್ಯಾಮಿದಸಾಬ್, ಮೂರ್ತುಜಾಸಾಬ್, ಹುಸೇನ್, ಹುಚ್ಚುಸಾಬ್, ಮೆಹಬೂಬ್ ಹಾಗೂ ಅಶ್ರಫಿ ಅರಬ್ಬೀ ಮೊದಲಾದ ಮಕ್ಕಳು ಸೇರಿದಂತೆ ಗ್ರಾಮದ ಹಿರಿಯರು ಮತ್ತು ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈದ್ ಮಿಲಾದ್ ಅಂಗವಾಗಿ ಅರಬ್ಬಿ ಮಕ್ತಬ್‌ನ ಮಕ್ಕಳು ವಿಶೇಷವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ



ಪ್ರವಾದಿಯವರ ಜೀವನ, ಮಾನವೀಯತೆ, ಪ್ರೀತಿ, ದಯೆ, ಸಹನೆ ಹಾಗೂ ಶಾಂತಿಯ ಸಂದೇಶಗಳನ್ನು ಸಾರುವ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಮಕ್ಕಳ ಭಾಗವಹಿಸುವಿಕೆ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು.

ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರ್ ಅವರು ಜಗತ್ತಿಗೆ ಶಾಂತಿ, ಸಹೋದರತ್ವ, ಮಾನವೀಯತೆ ಮತ್ತು ಸಮಾನತೆಯ ಸಂದೇಶವನ್ನು ಸಾರಿದ್ದಾರೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಪರಸ್ಪರ ಗೌರವ ಮತ್ತು ಸಹಬಾಳ್ವೆಯನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರು ಅಭಿಪ್ರಾಯಪಟ್ಟರು. ದಮ್ಮೂರ ಗ್ರಾಮದಲ್ಲಿ ಪ್ರತಿವರ್ಷವೂ ವಿವಿಧ ಧರ್ಮಗಳ ಜನರು ಪರಸ್ಪರ ಹಬ್ಬಗಳಲ್ಲಿ ಭಾಗವಹಿಸುವ ಮೂಲಕ ಸೌಹಾರ್ದತೆಯ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈದ್ ಮಿಲಾದ್ ಆಚರಣೆಯೂ ಇದೇ ಭಾವೈಕ್ಯತೆಯ ಪ್ರತೀಕವಾಗಿ ಕಂಡುಬಂದಿತು.

ಒಟ್ಟಾರೆ, ದಮ್ಮೂರ ಗ್ರಾಮದಲ್ಲಿ ನಡೆದ ಈದ್ ಮಿಲಾದ್ ಆಚರಣೆಯು ಧಾರ್ಮಿಕ ಸೌಹಾರ್ದತೆ, ಸಹೋದರತ್ವ ಮತ್ತು ಭಾವೈಕ್ಯತೆಯ ಸಂದೇಶವನ್ನು ಸಾರುವ ಮೂಲಕ ಗ್ರಾಮಸ್ಥರ ಗಮನ ಸೆಳೆಯಿತು. ಎಲ್ಲರೂ ಒಗ್ಗಟ್ಟಾಗಿ ಹಬ್ಬವನ್ನು ಆಚರಿಸಿ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವ ಸಂಕಲ್ಪ ಮಾಡಿದರು.

# ಆ. 30 ರಿಂದ ಸೆಪ್ಟೆಂಬರ್ 02ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಅವರ ಪ್ರವಾಸ

**ಧೃತಿ ನ್ಯೂಸ್ ಸುದ್ದಿ**

ಕೊಪ್ಪಳ: ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ ಅವರು ಆಗಸ್ಟ್ 30 ರಿಂದ ಸೆಪ್ಟೆಂಬರ್ 02 ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಸಚಿವರು ಆ. 30ರಂದು ಬೆಳಿಗ್ಗೆ 10 ಗಂಟೆಗೆ ಹೊಸಪೇಟೆಯಿಂದ ರಸ್ತೆ ಮೂಲಕ ನಿರ್ಗಮಿಸಿ 10.30ಕ್ಕೆ ಕೊಪ್ಪಳಕ್ಕೆ ಆಗಮಿಸಿ, ಯಲಬುರ್ಗಾ ಮತ್ತು ಕುಕನೂರು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಕೊಪ್ಪಳದಿಂದ ನಿರ್ಗಮಿಸಿ, ಮಧ್ಯಾಹ್ನ 2 ಗಂಟೆಗೆ ಕುಕನೂರಿಗೆ ಆಗಮಿಸಿ, ಮುಸ್ಲಿಂ ಸಮುದಾಯದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವವರು. 4 ಗಂಟೆಗೆ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ 'ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ' ನಾಮಕರಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬಳಿಕ 4.30ಕ್ಕೆ ಅಲ್ಲಿಂದ ನಿರ್ಗಮಿಸಿ, ಸಂಜೆ 4.45 ಗಂಟೆಗೆ ಯಲಬುರ್ಗಾಕ್ಕೆ ಆಗಮಿಸಿ ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅವರೊಂದಿಗೆ ಯಲಬುರ್ಗಾ ನಗರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದು, ಯಲಬುರ್ಗಾ ತಹಶೀಲ್ದಾರ ಕಛೇರಿ/ ತಾಲೂಕು ಆಡಳಿತ ಕೇಂದ್ರ (ಪ್ರಜಾ ಸೌಧ) ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ, ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ, ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ, ಜಗದ್ಗುರು ಶ್ರೀ ಬಸವೇಶ್ವರ ಮೂರ್ತಿ



ಸ್ಥಾಪನೆಗೆ ಶಂಕುಸ್ಥಾಪನೆ, ಯಲಬುರ್ಗಾ ಪಟ್ಟಣದ ಸರ್ಕಾರಿ ಉರ್ದು ಪ್ರೌಢಶಾಲೆ ಕಟ್ಟಡ ಮತ್ತು ಪೀಠೋಪಕರಣಗಳ ಪೂರೈಸುವ ಕಾಮಗಾರಿಯ ಉದ್ಘಾಟನೆ, ಸರ್ಕಾರಿ ಪದವಿ ಪೂರ್ವ ಕಾಲೇಜು 4 ಕೊಠಡಿಗಳ ಉದ್ಘಾಟನೆ, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು 4 ಕೊಠಡಿಗಳ ಉದ್ಘಾಟನೆ, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು 2 ಕೊಠಡಿಗಳ ಉದ್ಘಾಟನೆ ನೆರವೇರಿಸುವರು. ನಂತರ ಅಂದು ರಾತ್ರಿ 9 ಗಂಟೆಗೆ ಯಲಬುರ್ಗಾದಿಂದ ನಿರ್ಗಮಿಸಿ ಹೊಸಪೇಟೆಯಲ್ಲಿ ವಾಸ್ತವ್ಯ ಹೂಡುವರು.

ಆ. 31ರಂದು ಬೆಳಿಗ್ಗೆ 9ಕ್ಕೆ ಹೊಸಪೇಟೆಯಿಂದ ನಿರ್ಗಮಿಸಿ, 10 ಗಂಟೆಗೆ ಯಲಬುರ್ಗಾ ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮಕ್ಕೆ ಆಗಮಿಸಿ, ಅಲ್ಲಿನ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮ ನೆರವೇರಿಸುವರು. 10.30ಕ್ಕೆ ಗಾಣದಾಳ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿ, ತಾಳಕೇರಿ?ಗಾಣದಾಳ ಜಿಲ್ಲಾ ಪ್ರಮುಖ ರಸ್ತೆಯಲ್ಲಿ ಬರುವ ಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. 11.30ಕ್ಕೆ ಬೋದೂರ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಳ್ಳಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಮಾಟಲದಿನ್ನಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿ, ಬುದ್ಧ-ಬಸವ-ಅಂಬೇಡ್ಕರ್ ಸಮುದಾಯ ಭವನಕ್ಕೆ ಶಂಕುಸ್ಥಾಪನೆ ಮಾಡುವರು. ಮಧ್ಯಾಹ್ನ 2.30ಕ್ಕೆ ಹಿರೇಅರಳಿಹಳ್ಳಿ ಗ್ರಾಮದಲ್ಲಿ ಮತ್ತು 3.30ಕ್ಕೆ ವಜ್ರಬಂಡಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಳ್ಳಲಿದ್ದಾರೆ. ನಂತರ 4.30ಕ್ಕೆ ಮುರಡಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿ, ಮುರಡಿ?ಗೆದಗೇರಿ ಗ್ರಾಮಗಳ ಮಧ್ಯದಲ್ಲಿ ಹರಿಯುವ ಹಳ್ಳಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಉದ್ಘಾಟನೆ ನೆರವೇರಿಸುವರು. ನಂತರ ಸಂಜೆ 5.15ಕ್ಕೆ ಅಲ್ಲಿಂದ ನಿರ್ಗಮಿಸಿ ಹೊಸಪೇಟೆಗೆ ತೆರಳಿ ವಾಸ್ತವ್ಯ ಮಾಡುವರು. ಸೆಪ್ಟೆಂಬರ್ 01ರಂದು ಬೆಳಿಗ್ಗೆ 9ಕ್ಕೆ ಹೊಸಪೇಟೆಯಿಂದ ನಿರ್ಗಮಿಸಿ, 10.30 ಗಂಟೆಗೆ ಯಲಬುರ್ಗಾ ತಾಲ್ಲೂಕಿನ ಬಂಡಿ ಗ್ರಾಮಕ್ಕೆ ಆಗಮಿಸಿ, ಅಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಳ್ಳುವರು. 11.30ಕ್ಕೆ ತುಮ್ಮರಗುದ್ದಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿ, ತುಮ್ಮರಗುದ್ದಿ ಮತ್ತು ದಮ್ಮೂರು ಗ್ರಾಮಗಳ ಸರ್ಕಾರಿ ಪ್ರೌಢಶಾಲೆಗಳ ನೂತನ ತರಗತಿ ಕೊಠಡಿಗಳ ಹಾಗೂ ಪೀಠೋಪಕರಣಗಳ ಉದ್ಘಾಟನೆ ನೆರವೇರಿಸುವರು. ಮಧ್ಯಾಹ್ನ 12.30ಕ್ಕೆ ಗೆದಗೇರಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಂಡು, ಹುಲೇಗುಡ್ಡ ಶಾಲಾ ಕೊಠಡಿಗಳಿಗೆ ಶಂಕುಸ್ಥಾಪನೆ ಮತ್ತು ಕುದ್ರಿಕೋಟಗಿ?ಗೆದಗೇರಿ ಹಳ್ಳಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಉದ್ಘಾಟಿಸುವರು. 2.30ಕ್ಕೆ ಸಂಕನೂರು ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸುವರು. 3.30ಕ್ಕೆ ಹಿರೇಮ್ಯಾಗೇರಿ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಂಡು, ಹಿರೇಮ್ಯಾಗೇರಿಯಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘದ ಮತ್ತು ಗ್ರಾಮದ ಎಸ್.ಸಿ. ಕಾಲೋನಿಯ ಸಿಸಿ ರಸ್ತೆ ಉದ್ಘಾಟನೆ ನೆರವೇರಿಸಿಲಿದ್ದಾರೆ. 4.30ಕ್ಕೆ ಮುಧೋಳ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿ, ಅಲ್ಲಿನ ಸರ್ಕಾರಿ ಐಟಿಐ ವರ್ಕ್‌ಶಾಪ್ ಕಟ್ಟಡ ಉದ್ಘಾಟಿಸಿ ಬಳಿಕ ಅಂದು ಸಂಜೆ 5.15ಕ್ಕೆ ಮುಧೋಳದಿಂದ ನಿರ್ಗಮಿಸಿ ಹೊಸಪೇಟೆಗೆ ತೆರಳಿ ವಾಸ್ತವ್ಯ ಹೂಡುವರು. ಸೆ. 02ರಂದು ಬೆಳಿಗ್ಗೆ 9ಕ್ಕೆ ಹೊಸಪೇಟೆಯಿಂದ ನಿರ್ಗಮಿಸಿ, 10.30 ಗಂಟೆಗೆ ಯಲಬುರ್ಗಾ ತಾಲ್ಲೂಕಿನ ಚಿಕ್ಕಮ್ಯಾಗೇರಿಗೆ ಆಗಮಿಸಿ, ಈ ಗ್ರಾಮದಲ್ಲಿ ಮತ್ತು 11.30ಕ್ಕೆ ಕಲ್ಲೂರ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸುವರು. ನಂತರ ಮಧ್ಯಾಹ್ನ 12.30ಕ್ಕೆ ರಾಜೂರು ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ಕೈಗೊಂಡು, ರಾಜೂರು-ಆಡೂರು ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಕಾಮಗಾರಿಯ ಉದ್ಘಾಟನೆ, ರಾಜೂರು ಸ.ಮಾ.ಹಿ.ಪ್ರಾ. ಶಾಲೆ ಮತ್ತು ದ್ಯಾಂಪೂರು ಸ.ಹಿ.ಪ್ರಾ ಶಾಲೆಗಳ ತಲಾ 2 ತರಗತಿ ಕೊಠಡಿಗಳ ಉದ್ಘಾಟನೆ ನೆರವೇರಿಸುವರು. ನಂತರ 1.30ಕ್ಕೆ ಸಂಗನಾಳ ಗ್ರಾಮದಲ್ಲಿ ಜನಸಂದರ್ಶನ ಕಾರ್ಯಕ್ರಮ ನಡೆಸಿದ ಬಳಿಕ ಸಚಿವರು ಅಂದು ಮಧ್ಯಾಹ್ನ 2.15ಕ್ಕೆ ಸಂಗನಾಳ ಗ್ರಾಮದಿಂದ ಹುಬ್ಬಳ್ಳಿ ಕಡೆಗೆ ಪ್ರಯಾಣ ಬೆಳಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೊಪ್ಪಳ ಜಿಲ್ಲೆಯ ವಿಶೇಷ ಚೇತನರಿಗೆ ಮೂರು ದಿನಗಳ ಕ್ರೀಡಾ ತರಬೇತಿ ಕಾರ್ಯಾಗಾರಕ್ಕೆ ಚಾಲನೆ

# ಅಂಗವಿಕಲತೆ ನ್ಯೂನತೆಯಲ್ಲ, ಛಲವಿದ್ದರೆ ಕ್ರೀಡೆಯಲ್ಲಿ ಸಾಧನೆ ಸಾಧ್ಯ : ಹೇಮಲತಾ ನಾಯಕ

**ಧೃತಿ ನ್ಯೂಸ್ ಸುದ್ದಿ**

ಕೊಪ್ಪಳ: ಅಂಗವಿಕಲತೆ ನ್ಯೂನತೆಯಲ್ಲ, ಛಲವಿದ್ದರೆ ಕ್ರೀಡೆಯಲ್ಲಿ ಸಾಧನೆ ಸಾಧ್ಯವಾಗಿದೆ ಎಂದು ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ, ಕೊಪ್ಪಳ ಹಾಗೂ ಆಗು ನೀ ಅನಿಕೇತನ ಫೌಂಡೇಶನ್, ಬೆಂಗಳೂರು ಇವರ ಸಂಂಮುಕಾರ್ಯಶ್ರಯದಲ್ಲಿ ಜಿಲ್ಲಾ ಪಂಚಾಯತ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಗುರುವಾರ (ಆ. 27ರಂದು) ಹಮ್ಮಿಕೊಂಡಿದ್ದ ಕೊಪ್ಪಳ ಜಿಲ್ಲೆಯ ವಿಶೇಷ ಚೇತನರಿಗೆ ಮೂರು ದಿನಗಳ ಕ್ರೀಡಾ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಿಶೇಷ ಚೇತನರಲ್ಲಿ ಯಾವುದೇ ನ್ಯೂನತೆ ಇರುವುದಿಲ್ಲ, ಅವರಲ್ಲಿ ಸಾಧನೆ ಮಾಡುವ ವಿಶೇಷ ಗುಣಗಳಿರುತ್ತವೆ. ಅಂಗವಿಕಲತೆ ದೇಹಕ್ಕಷ್ಟೇ ಹೊರತು ಮನಸ್ಸಿಗಲ್ಲ. ಇಂದು ವೀಲ್‌ಚೇರ್ ಬ್ಯಾಡ್ಮಿಂಟನ್, ಈಜು ಸೇರಿದಂತೆ ಹತ್ತು ಹಲವು ಕ್ರೀಡೆಗಳಲ್ಲಿ ವಿಶೇಷ ಚೇತನರು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಕೀರ್ತಿ ಹೆಚ್ಚಿಸುತ್ತಿದ್ದಾರೆ. ಹಾಗಾಗಿ ವಯಸ್ಸು ಅಥವಾ ದೈಹಿಕ ಸಮಸ್ಯೆಗಳನ್ನು ಲೆಕ್ಕಿಸದೆ ಸಾಧನೆ ಮಾಡುವ



ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಸಮಾಜದಲ್ಲಿನ ಮೂಢನಂಬಿಕೆಗಳನ್ನು ತೊಡೆದುಹಾಕಿ, ದಿವ್ಯಾಂಗರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಿದೆ ಎಂದರು. ಸರ್ಕಾರದ ಜೊತೆಗೆ 'ಆಗು ನೀ ಅನಿಕೇತನ ಫೌಂಡೇಷನ್' ಸೇರಿದಂತೆ ಸ್ವಯಂ ಸೇವಾ ಸಂಸ್ಥೆಗಳು ವಿಶೇಷ ಚೇತನರಿಗೆ ಕ್ರೀಡಾ ತರಬೇತಿ ಹಾಗೂ ವಿವಿಧ ಕಾರ್ಯಕ್ರಮಗಳ ಮೂಲಕ ನೈತಿಕ ಬೆಂಬಲ ನೀಡುತ್ತಿರುವುದು ಶ್ಲಾಘನೀಯ. ನಮ್ಮ ಜಿಲ್ಲೆಯಲ್ಲಿ ಮೊದಲ ಬಾರಿಗೆ ಇಂತಹ ತರಬೇತಿ ಕಾರ್ಯಾಗಾರ ಆಯೋಜನೆಯಾಗಿದ್ದು, ಜಿಲ್ಲೆಯ ಕ್ರೀಡಾಪಟುಗಳು ಇದರ ಸಂಪೂರ್ಣ ಸದುಪಯೋಗ ಪಡೆದುಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಅವರು ಕರೆ ನೀಡಿದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, ಯಾವುದೇ ಸಾಧನೆಯೂ ಆರಂಭದಲ್ಲಿ ಕಷ್ಟ ಎಂದೇ ಅನಿಸುತ್ತದೆ. ನಿರಂತರ ಪ್ರಯತ್ನ ಮತ್ತು ಸರಿಯಾದ ಕೌಶಲ್ಯವನ್ನು ಅಳವಡಿಸಿಕೊಂಡಾಗ ಯಶಸ್ಸು ತಾನಾಗಿಯೇ ಒಲಿಯುತ್ತದೆ. ಥಾಮಸ್ ಅಲ್ವಾ ಎಡಿಸನ್ ಬಲ್ಬ್ ಆವಿಷ್ಕಾರ ಮಾಡುವಾಗ ಸಾವಿರಾರು ಬಾರಿ ಸೋತರೂ ಧೃತಿಗೆಡದೆ, ಅದನ್ನು ಸಾಧಿಸಿದರು. ಅದೇ ರೀತಿ ವಿಶೇಷ ಚೇತನರು ತಮ್ಮ ಪಯಣವನ್ನು ಅರ್ಧಕ್ಕೆ ನಿಲ್ಲಿಸದೆ ಮುನ್ನಡೆಯಬೇಕು ಎಂದರು.

ಪ್ರತಿಭೆ ಮತ್ತು ಶಕ್ತಿ ಇದ್ದರೂ ಸರಿಯಾದ ಕೌಶಲ್ಯ ಹಾಗೂ ಮಾರ್ಗದರ್ಶನದ ಕೊರತೆಯಿಂದ ಹಲವರು ಹಿಂದುಳಿಯುತ್ತಾರೆ. ಅಂತಹವರಿಗೆ ದಾರಿ ತೋರಿಸಲು ಈ ಮೂರು ದಿನಗಳ ಕಾರ್ಯಾಗಾರ ಉತ್ತಮ ವೇದಿಕೆಯಾಗಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ವಿಶೇಷ ಚೇತನ ಸಾಧಕರು ಹಾಗೂ ತರಬೇತುದಾರರು ಇಲ್ಲಿ ಮಾರ್ಗದರ್ಶನ ನೀಡುತ್ತಿದ್ದು, ಇದನ್ನು ಪ್ರತಿಯೊಬ್ಬ ವಿಶೇಷ ಚೇತನರು ಸದುಪಯೋಗಪಡಿಸಿಕೊಳ್ಳಬೇಕು. ಸರ್ಕಾರದಿಂದ ಇರುವ ಸೌಲಭ್ಯಗಳು ಮತ್ತು ಇತರೆ ಸಹಕಾರವನ್ನು ಅರ್ಹರಿಗೆ ತಲುಪಿಸಲು ಜಿಲ್ಲಾಡಳಿತ ಸದಾ ಬದ್ಧವಾಗಿದೆ. ಕಾರ್ಯಾಗಾರದಲ್ಲಿ ಭಾಗವಹಿಸಿದವರು ಕೇವಲ ಕೇಳುವುದಷ್ಟೇ ಅಲ್ಲದೆ, ಮುಂದಿನ ದಿನಗಳಲ್ಲಿ ತಮ್ಮ ಸುತ್ತಮುತ್ತಲಿನ ಇತರ ವಿಶೇಷ ಚೇತನರನ್ನೂ ಕರೆತಂದು ಇಂತಹ ತರಬೇತಿಯ ಪ್ರಯೋಜನ ಪಡೆಯುವಂತೆ ಪ್ರೇರೇಪಿಸಬೇಕು ಎಂದು ಅವರು ಸಲಹೆ ನೀಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ ಜಾಬಗೌಡರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಚೇತನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ಇಲಾಖೆಯು ವಿವಿಧ ಯೋಜನೆಗಳನ್ನು ಕೈಗೊಂಡಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ತರಬೇತಿ ಹಾಗೂ ಮೈದಾನ ಬಳಕೆಗೆ ವಿಶೇಷ ಚೇತನರಿಗೆ ಸದಾ ಮುಕ್ತ ಮತ್ತು ಉಚಿತ ಅವಕಾಶ ಕಲ್ಪಿಸಲಾಗಿದೆ. ಆಗು ನೀ ಅನಿಕೇತನ ಫೌಂಡೇಶನ್ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟುಗಳನ್ನು ಕರೆಸಿ, ಇಲ್ಲಿನ ಕ್ರೀಡಾಪಟುಗಳಿಗೆ 'ಒನ್-ಟು-ಒನ್' (ನೇರ) ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

ಮೂರು ದಿನಗಳ ಕಾಲ ನಡೆಯುವ ಈ ಶಿಬಿರದಲ್ಲಿ ಅಥ್ಲೆಟಿಕ್ಸ್, ಈಜು (ಸ್ವಿಮ್ಮಿಂಗ್) ಹಾಗೂ ಬ್ಯಾಡ್ಮಿಂಟನ್ ಕ್ರೀಡೆಗಳಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ದೈಹಿಕ ನ್ಯೂನತೆಯನ್ನು ಮೀರಿ ಸಾಧನೆ ಮಾಡಿದಾಗ ಸಮಾಜದಲ್ಲಿ ಸಿಗುವ ಗೌರವವೇ ಬೇರೆ. ಅಂತರರಾಷ್ಟ್ರೀಯ ಕ್ರೀಡಾಪಟುಗಳು ಸತತ ಪರಿಶ್ರಮದಿಂದ ತಮ್ಮ ಅಂಗವೈಕಲ್ಯವನ್ನು ಮರೆಸಿ ದೇಶಕ್ಕೆ ಕೀರ್ತಿ ತಂದಿದ್ದಾರೆ. ಅದೇ ಮಾದರಿಯಲ್ಲಿ ಕೊಪ್ಪಳ ಜಿಲ್ಲೆಯ ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಮಿಂಚಬೇಕು. ಲಭ್ಯವಿರುವ ಈ ಸುವರ್ಣಾವಕಾಶ ಹಾಗೂ ವೇದಿಕೆಯನ್ನು ಗರಿಷ್ಠ ಮಟ್ಟದಲ್ಲಿ ಸದುಪಯೋಗಪಡಿಸಿಕೊಂಡು, ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಕನಸುಗಳಿಗೆ ರೆಕ್ಕೆ ಕಟ್ಟಿಕೊಳ್ಳಬೇಕು ಎಂದು ಅವರು ಜಿಲ್ಲೆಯ ವಿಶೇಷ ಚೇತನರಿಗೆ ಕರೆ ನೀಡಿದರು. ಆ. 28 ಮತ್ತು 29ರಂದು ಜಿಲ್ಲಾ ಕ್ರೀಡಾಂಗಣದಲ್ಲಿ 2 ದಿನಗಳ ಕಾಲ ಅಂತರರಾಷ್ಟ್ರೀಯ ತರಬೇತುದಾರರಿಂದ ಈಜು, ಬ್ಯಾಡ್ಮಿಂಟನ್ ಹಾಗೂ ಅಥ್ಲೆಟಿಕ್ಸ್ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು.

**ಸನ್ಮಾನ:** ಅಂತರರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟುಗಳು ಮತ್ತು ತರಬೇತುದಾರರು ಹಾಗೂ ಸಲಹೆಗಾರರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ.

2ನೇ ಪುಟಕ್ಕೆ....

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

1ನೇ ಪುಟದಿಂದ....

## ಅಂಗವಿಕಲತೆ ನ್ಯೂನತೆಯಲ್ಲ, ಛಲವಿದ್ದರಂ ಕ್ರೀಡೆಯಲ್ಲಿ ಸಾಧನೆ ಸಾಧ್ಯ : ಹೇಮಲತಾ ನಾಯಕ

ವೆಂಕಟೇಶ ದೇಶಪಾಂಡೆ, ಆಗು ನೀ ಅನಿಕೇತನ ಫೌಂಡೇಶನ್ ಸಂಸ್ಥಾಪಕರು ಹಾಗೂ ಸಿಇಓ ಧರಣಿ ಬಿ. ಸಸಿ, ಅಂತರರಾಷ್ಟ್ರೀಯ ಈಜು ಕ್ರೀಡಾಪಟು ಬೆಳಗಾವಿಯ ರಾಘವೇಂದ್ರ ಆರ್. ಅನ್ವೇಕರ್, ಅಂತರರಾಷ್ಟ್ರೀಯ ಕಾಮನ್ ವೆಲ್ತ್ ಕ್ರೀಡಾಕೂಟದ ಫೇನ್ಸಿಂಗ ಕ್ರೀಡೆಯಲ್ಲಿ ಬಂಗಾರದ ಪದಕ ವಿಜೇತರಾದ ಬೆಂಗಳೂರು-ಹೊಸಪೇಟೆಯ ರಾಘವೇಂದ್ರ ಪಿ., ಅಂತರರಾಷ್ಟ್ರೀಯ ಈಜು ಕ್ರೀಡಾಪಟು ಬೆಳಗಾವಿಯ ಶ್ರೀಧರ ನಾಗಪ್ಪ ಮಾಳಗಿ, ಅಂತರರಾಷ್ಟ್ರೀಯ ಶೆಟಲ್ ಬ್ಯಾಡ್ಮಿಂಟನ್ ಕ್ರೀಡಾಪಟು ಹಾಗೂ ತರಬೇತುದಾರರಾದ ಬಿ.ಆನಂದಕುಮಾರ, ಅಥ-ೆಟಿಕ್ಸ್ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಕ್ರೀಡಾ ಸಲಹೆಗಾರರಾದ ಆರ್.ರಾಮಚಂದ್ರ, ಅಂತರರಾಷ್ಟ್ರೀಯ ಈಜು ಕ್ರೀಡಾಪಟು ಮತ್ತು ಅಂತರರಾಷ್ಟ್ರೀಯ ತರಬೇತುದಾರರು ಹಾಗೂ ಸಲಹೆಗಾರರಾದ ಎಸ್. ಆರ್.ಶಿಂದೇ, ತಾಲ್ಲೂಕು ಕ್ರೀಡಾಧಿಕಾರಿ ಶರಣಬಸವ ಬಂಡಿಹಾಳ ಸೇ-ರಿದಂತೆ ಕ್ರೀಡಾ ಇಲಾಖೆ ಸಿಬ್ಬಂದಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಉದ್ಘಾಟನೆ ಕಾರ್ಯಕ್ರಮದ ಬಳಿಕ ನಡೆದ ತರಬೇತಿ ಕಾರ್ಯಾಗಾರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟುಗಳು, ತರಬೇತುದಾರರು ಹಾಗೂ ಸಲಹೆಗಾರರು, ಕೊಪ್ಪಳ ಜಿಲ್ಲೆಯ ವಿಶೇಷ ಚೇತನರಿಗೆ ಮಾರ್ಗದರ್ಶನ ಮಾಡಿದರು. ಕಾರ್ಯಾಗಾರದಲ್ಲಿ ಕೊಪ್ಪಳ ಜಿಲ್ಲೆಯ ವಿಶೇಷ ಚೇತನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ನೇಪಾಳ ಪ್ರವಾಹದ ಬೆನ್ನಲ್ಲೇ ಬಿಹಾರ ಸರ್ಕಾರ ಹೈಅಲರ್ಟ್ : ಗಂಡಕ್ ಬ್ಯಾರೇಜ್‌ನ ಎಲ್ಲಾ 36 ಗೇಟ್ ಓಪನ್

ಪಾಟ್ನಾ: ನೇಪಾಳ ಮತ್ತು ಟಿಬೆಟ್ ಗಡಿ ಭಾಗದಲ್ಲಿ ಸಂಭವಿಸಿದ ಹಠಾತ್ ಪ್ರವಾಹದ ಅಲೆ ಗಂಡಕ್ ನದಿ ವ್ಯವಸ್ಥೆಯನ್ನು ಪ್ರವೇಶಿಸಿರುವ ಹಿನ್ನೆಲೆಯಲ್ಲಿ, ಬಿಹಾರ ಸರ್ಕಾರ ತೀವ್ರ ಮುನ್ನೆಚ್ಚರಿಕೆ ಕ್ರಮವಾಗಿ ವಾಲ್ಮೀಕಿನಗರದಲ್ಲಿರುವ ಗಂಡಕ್ ಬ್ಯಾರೇಜ್‌ನ ಎಲ್ಲಾ 36 ಗೇಟ್‌ಗಳನ್ನು ತೆರೆದಿದೆ.

ಟಿಬೆಟ್‌ನಲ್ಲಿ ಸಂಭವಿಸಿದ ಭೂಕಂಪನದಿಂದ ಹಿಮನದಿ ಸ್ಫೋಟಗೊಂಡು ಉಂಟಾದ ಭೀಕರ ಪ್ರವಾಹದಲ್ಲಿ ನೇಪಾಳದಲ್ಲಿ 150ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 133 ಭಾರತೀಯರು ಸೇರಿದಂತೆ 750ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ಈ ದುರಂತದ ಹಿನ್ನೆಲೆಯಲ್ಲಿ ನೆರೆ ರಾಜ್ಯ ಬಿಹಾರದ ನದಿಪಾತ್ರದ ಜಿಲ್ಲೆಗಳಲ್ಲೂ ಆತಂಕದ ವಾತಾವರಣ ನಿರ್ಮಾಣವಾಗಿದೆ. ರಾತ್ರಿ 11 ಗಂಟೆಯ ವೇಳೆಗೆ ಬ್ಯಾರೇಜ್‌ನಿಂದ ಸುಮಾರು 1.50 ಲಕ್ಷ ಕ್ಯೂಸೆಕ್ ನೀರನ್ನು ಹೊರಬಿಡಲಾಗಿದ್ದು, ಇದು ದಿನದ ಗರಿಷ್ಠ ಹೊರಹರಿವಾಗಿದೆ. ಸದ್ಯ ನೀರಿನ ಹರಿವು ಕ್ರಮೇಣ ಕಡಿಮೆಯಾಗುವ



ನಿರೀಕ್ಷೆಯಿದೆ. ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹಾಗೂ ಮುಖ್ಯ ಕಾರ್ಯದರ್ಶಿ ಪ್ರತ್ಯಯ ಅಮತ್ ತುರ್ತು ಸಭೆ ನಡೆಸಿ, ಗಡಿ ಜಿಲ್ಲೆಗಳ ಅಧಿಕಾರಿಗಳಿಗೆ 24 ಗಂಟೆಯೂ ನಿಗಾ ವಹಿಸುವಂತೆ ಸೂಚಿಸಿದ್ದಾರೆ.ಪಶ್ಚಿಮ ಚಂಪಾರಣ್, ಪೂರ್ವ ಚಂಪಾರಣ್, ಗೋಪಾಲ್‌ಗಂಜ್, ಸರನ್, ಮುಜಫರ್‌ಪುರ, ವೈಶಾಲಿ, ಸೀತಾಮರ್ಹಿ ಹಾಗೂ ಶಿವಹರ್ ಜಿಲ್ಲೆಗಳಲ್ಲಿ ತೀವ್ರ ಕಟ್ಟೆಚ್ಚರ ಘೋಷಿಸಲಾಗಿದೆ. ಯಾವುದೇ ತುರ್ತು ಪರಿಸ್ಥಿತಿ ಎದುರಾದಲ್ಲಿ ಕಾರ್ಯಾಚರಣೆ ಕೈಗೊಳ್ಳಲು ಎನ್‌ಡಿಆರ್-ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳನ್ನು ಬೆಟ್ಟಿಯಾ, ಗೋಪಾಲ್‌ಗಂಜ್ ಹಾಗೂ ಮುಜಫರ್‌ಪುರದಲ್ಲಿ ನಿಯೋಜಿಸಲಾಗಿದೆ. ಸಶಸ್ತ್ರ ಸೀಮಾ ಬಲ್ ಕೂಡ ನೆರವಿಗೆ ಸಿದ್ಧವಾಗಿದೆ. ಜಲಸಂಪನ್ಮೂಲ ಇಲಾಖೆ ನದಿ ಪಾತ್ರದ ಒಡ್ಡುಗಳು, ತಗ್ಗು ಪ್ರದೇಶಗಳು ಹಾಗೂ ಸೇತುವೆಗಳ ಮೇಲ್ವಿಚಾರಣೆಯನ್ನು ತೀವ್ರಗೊಳಿಸಿದೆ. ಅಗತ್ಯವಿದ್ದಲ್ಲಿ ಸ್ಥಳಾಂತರಿಸಲು ಯೋಜನೆ ರೂಪಿಸಲಾಗಿದ್ದು, ದೋಣಿಗಳು, ಆಶ್ರಯ ತಾಣಗಳು ಹಾಗೂ ಸಮುದಾಯ ಅಡುಗೆಮನೆಗಳನ್ನು ಸಿದ್ಧಪಡಿಸಲಾಗಿದೆ. ಸಾರ್ವಜನಿಕ ಧ್ವನಿವರ್ಧಕಗಳ ಮೂಲಕ ಸಂತ್ರಸ್ತ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ಸಂದೇಶಗಳನ್ನು ಪ್ರಸಾರ ಮಾಡಲಾಗುತ್ತಿದೆ. ಪರಿಸ್ಥಿತಿಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡುತ್ತಿರುವ ಮುಖ್ಯಮಂತ್ರಿ, ನೇಪಾಳದಲ್ಲಿ ಸಂಭವಿಸಿದ ಜೀವಹಾನಿಗೆ ತೀವ್ರ ಸಂತಾಪ ಸೂಚಿಸಿದ್ದಾರೆ. ಸಂಕಷ್ಟದಲ್ಲಿರುವ ಭಾರತೀಯರ ರಕ್ಷಣೆಗೆ ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಿ ಸಾಧ್ಯವಿರುವ ಎಲ್ಲ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅಧಿಕಾರಿಗಳು ಸಾರ್ವಜನಿಕರು ಆತಂಕಕ್ಕೊಳಗಾಗದೆ ಮುನ್ನೆಚ್ಚರಿಕೆ ವಹಿಸುವಂತೆ ಹಾಗೂ ಆಡಳಿತದಿಂದ ನೀಡಲಾಗುವ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಿದ್ದಾರೆ.

## ಮೊದಲ ದಿನವೇ 140 ಕೋಟಿ ರೂ. ಬಾಚಿದ 'ಟಾಕ್ಸಿಕ್'




ಬೆಂಗಳೂರು: ಜಾಗತಿಕ ಚಿತ್ರರಂಗದಲ್ಲಿ ಸಾಕಷ್ಟು ಕುತೂಹಲ ಮೂಡಿಸಿದ್ದ ರಾಕಿಂಗ್ ಸ್ಟಾರ್ ಯಶ್ ದ್ವಿಪಾತ್ರದಲ್ಲಿ ನಟಿಸಿರುವ 'ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್-ಅಪ್ಸ್' ಸಿನಿಮಾ ನಿರೀಕ್ಷೆಯಂತೆ ಮೊದಲ ದಿನವೇ 100 ಕೋಟಿ ರೂ. ಕ್ಲಬ್ ಸೇರುವ ಮೂಲಕ ದಾಖಲೆ ಬರೆದಿದೆ.

ಮಲಯಾಳಂ ಚಿತ್ರ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನದ 'ಟಾಕ್ಸಿಕ್' ಸಿನಿಮಾ ಕನ್ನಡ, ತೆಲುಗು, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ಬಿಡುಗಡೆಯಾಗಿದೆ. ಭಾರತದಲ್ಲಿ ಮೊದಲ ದಿನವೇ 100 ಕೋಟಿ ರೂ.ಗೂ ಅಧಿಕ ಗಳಿಕೆ ಕಂಡಿರುವ ಸಿನಿಮಾ, ವಿದೇಶಿ ಮಾರುಕಟ್ಟೆಯಲ್ಲೂ ಉತ್ತಮ ಪ್ರದರ್ಶನ ಕಾಣುವ ಮೂಲಕ ಒಟ್ಟಾರೆ 140 ಕೋಟಿ ರೂ. ಗಡಿ ತಲುಪಿದೆ ಎಂದು ವರದಿಯಾಗಿದೆ. ಬೆಂಗಳೂರಿನ ನರ್ತಕಿ, ಸಂತೋಷ್, ತ್ರಿವೇಣಿ ಸೇರಿದಂತೆ ಹಲವು ಪ್ರಮುಖ ಚಿತ್ರಮಂದಿರಗಳಲ್ಲಿ 'ಟಾಕ್ಸಿಕ್' ಅಬ್ಬರ ಜೋರಾಗಿದೆ. ಮೊದಲ ದಿನವೇ ದೇಶಾದ್ಯಂತ ಒಟ್ಟು 24,579 ಶೋಗಳು ನಡೆದಿವೆ.

**ಭಾಷಾವಾರು ಕಲೆಕ್ಷನ್**

ಕನ್ನಡಕ್ಕಿಂತ ಹಿಂದಿ ಆವೃತ್ತಿಯಲ್ಲಿ 'ಟಾಕ್ಸಿಕ್' ಹೆಚ್ಚಿನ ಗಳಿಕೆ ಕಂಡಿದೆ ಎಂದು ಮೂಲಗಳು ತಿಳಿಸಿವೆ. ಹಿಂದಿ ಆವೃತ್ತಿಯ 16,670 ಶೋಗಳಿಂದ 55 ಕೋಟಿ ರೂ. ಸಂಗ್ರಹವಾಗಿದ್ದರೆ, ಕನ್ನಡ ಆವೃತ್ತಿಯ 2,031 ಶೋಗಳಿಂದ 23.30 ಕೋಟಿ ರೂ. ಗಳಿಸಿದೆ. ತೆಲುಗು ಆವೃತ್ತಿಯ 3,258 ಶೋಗಳಿಂದ 16 ಕೋಟಿ ರೂ., ತಮಿಳು ಆವೃತ್ತಿಯ 2,140 ಶೋಗಳಿಂದ 5.50 ಕೋಟಿ ರೂ. ಹಾಗೂ ಮಲಯಾಳಂ ಆವೃತ್ತಿಯ 480 ಶೋಗಳಿಂದ 1.30 ಕೋಟಿ ರೂ. ಗಳಿಕೆ ಕಂಡಿದೆ ಎಂದು ವರದಿಯಾಗಿದೆ. 'ಟಾಕ್ಸಿಕ್' ಸಿನಿಮಾದಲ್ಲಿ ಬಹುದೊಡ್ಡ ತಾರಾಗಣವಿದ್ದು, ರಾಕಿಂಗ್ ಸ್ಟಾರ್ ಯಶ್ ದ್ವಿಪಾತ್ರದಲ್ಲಿ ನಟಿಸಿದ್ದಾರೆ. ನಯನತಾರಾ, ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ತಾರಾ ಸುತಾರಿಯಾ ಹಾಗೂ ರುಕ್ಮಿಣಿ ವಸಂತ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು, ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ವೆಂಕಟ್ ನಾರಾಯಣ್ ಹಾಗೂ ಯಶ್ ಅವರು ಕೆವಿಎನ್ ಪ್ರೊಡಕ್ಷನ್ಸ್ ಮತ್ತು ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಎಲ್‌ಎಲ್‌ಪಿ ಅಡಿ ಚಿತ್ರವನ್ನು ನಿರ್ಮಿಸಿದ್ದಾರೆ. ರಾಜೀವ್ ರವಿ ಛಾಯಾಗ್ರಹಣ, ರವಿ ಬಸ್ರೂರು, ವಿಶಾಲ್ ಮಿಶ್ರಾ ಹಾಗೂ ತನಿಷ್ಕ್ ಬಾಗ್ಚಿ ಸಂಗೀತ ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

# ಮತ್ತೆ ಸಂಸತ್ ಅಧಿವೇಶನ ಕರೆಯುವ ಸಾಧ್ಯತೆಗಳ ಬಗ್ಗೆ ಸುಳಿವು ನೀಡಿದ ಸಚಿವ ಕಿರಣ್ ರಿಜಿಜು

ನವದೆಹಲಿ: ಸಂಸತ್ತಿನ ಮಳೆಗಾಲದ ಅಧಿವೇಶನ ಮುಕ್ತಾಯಗೊಂಡು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದ್ದರೂ, ಸದನವನ್ನು ಔಪಚಾರಿಕವಾಗಿ ಮುಕ್ತಾಯಗೊಳಿಸದಿರುವ ಹಿನ್ನೆಲೆಯಲ್ಲಿ ಸಂಸತ್ತನ್ನು ಮತ್ತೆ ಕರೆಯುವ ಸಾಧ್ಯತೆಗಳ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಹತ್ವದ ಸುಳಿವು ನೀಡಿದ್ದಾರೆ.ಇಂಡಿಯಾ ಟುಡೇ ಟಿವಿಗೆ ನೀಡಿದ ಸಂದರ್ಶನದಲ್ಲಿ ಅವರು ಈ ಕುರಿತು ಮಾತನಾಡಿದ್ದು, ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ.

ಕಳೆದ ಆ.13ರಂದು ಉಭಯ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದ್ದರೂ, ಇದುವರೆಗೂ ಅಧಿವೇಶನವನ್ನು ಔಪಚಾರಿಕವಾಗಿ ಮುಕ್ತಾಯಗೊಳಿಸಲಾಗಿಲ್ಲ. 1952ರಿಂದಲೂ ಸಂಸತ್ತಿನ ಅಧಿವೇಶನವನ್ನು ಔಪಚಾರಿಕವಾಗಿ ಮುಕ್ತಾಯಗೊಳಿಸದೆ, ಸದನವನ್ನು ಮತ್ತೆ ಕರೆಯಲಾದ ಹಲವು ನಿದರ್ಶನಗಳಿವೆ ಎಂದು ಕಿರಣ್ ರಿಜಿಜು ತಿಳಿಸಿದ್ದಾರೆ.

ಡಿಲಿಮಿಟೇಶನ್ (ಕ್ಷೇತ್ರ ಪುನರ್‌ವಿಂಗಡಣೆ) ಮಸೂದೆ ಹಾಗೂ ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಯಂತಹ ಪ್ರಮುಖ ಬಾಕಿ ಮಸೂದೆಗಳನ್ನು ಮತ್ತೆ ಮಂಡಿಸಲು ಸರ್ಕಾರ ಇದೇ ಅಧಿವೇಶನವನ್ನು ಬಳಸಿಕೊಳ್ಳಬಹುದೆಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ. ವಿಶೇಷ ಅಧಿವೇಶನ ಅಥವಾ ಸದನವನ್ನು ಮತ್ತೆ ಕರೆಯುವ ಕುರಿತು ನೇರ ಉತ್ತರ ನೀಡಲು ಸಚಿವರು ನಿರಾಕರಿಸಿದ್ದಾರೆ. ತಮ್ಮ ಹೇಳಿಕೆಗಳನ್ನು ಎರಡೂ ರೀತಿಯಲ್ಲಿ ವ್ಯಾಖ್ಯಾನಿಸಬಹುದು ಎಂದು ಹೇಳುವ ಮೂಲಕ ಅವರು ಈ ವಿಚಾರದಲ್ಲಿ ಕುತೂಹಲ ಕಾಯ್ದುಕೊಂಡಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ನಡೆದ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸಂಬಂಧಿಸಿದ 131ನೇ ಸಾಂವಿಧಾನಿಕ ತಿದ್ದುಪಡಿ ಹಾಗೂ ಡಿಲಿಮಿಟೇಶನ್ ಮಸೂದೆಗಳು ಲೋಕಸಭೆಯಲ್ಲಿ ಅಗತ್ಯವಿರುವ ಮೂರನೇ



ಎರಡರಷ್ಟು ಬಹುಮತ ಪಡೆಯುವಲ್ಲಿ ವಿಫಲವಾಗಿದ್ದವು. ಅಧಿವೇಶನವನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸದಿರುವ ಹಿನ್ನೆಲೆಯಲ್ಲಿ, ಸರ್ಕಾರ ಮತ್ತೆ ಸದನವನ್ನು ಕರೆದು ಬಾಕಿ ಉಳಿದಿರುವ ಪ್ರಮುಖ ಶಾಸಕಾಂಗ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಿದೆಯೇ ಅಥವಾ ಹೊಸ ತಂತ್ರಗಾರಿಕೆ ರೂಪಿಸಲಿದೆಯೇ ಎಂಬುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಬೇಕಿದೆ. ಸಂಸತ್ತನ್ನು ಯಾವಾಗ ಮತ್ತೆ ಕರೆಯಬೇಕು ಎಂಬುದು ಸಂಪೂರ್ಣವಾಗಿ ಸರ್ಕಾರದ ತೀರ್ಮಾನಕ್ಕೆ ಬಿಟ್ಟ ವಿಚಾರ ಎಂದು ರಿಜಿಜು ಸ್ಪಷ್ಟಪಡಿಸಿದ್ದಾರೆ.

## ನಿಂತಿದ್ದ ಟಾಟಾ ಏಸ್ ವಾಹನಕ್ಕೆ ಬೈಕ್ ಡಿಕ್ಕಿಯಾಗಿ ಮೂವರು ಯುವಕರ ದುರ್ಮರಣ



ಕೊಪ್ಪಳ: ಒಂದೇ ಬೈಕ್‌ನಲ್ಲಿ ಮೂವರು ಯುವಕರು ಪ್ರಯಾಣಿಸುತ್ತಿದ್ದಾಗ ನಿಯಂತ್ರಣ ತಪ್ಪಿ ನಿಂತಿದ್ದ ಟಾಟಾ ಏಸ್ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿರುವ ಘಟನೆ ಕುಕನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.ನರಗುಂದ ಮೂಲದ ಮಾಬೂಸಾಬ್ ಬುಡನ್‌ಸಾಬ್ ಮಟಗೇರಿ (17), ಫಕ್ರುಸಾಬ್ ಹಸನಸಾಬ್ ವಟಗೇರಿ (19) ಹಾಗೂ ಶಾನುಸಾಬ್ ಬಸಾಪುರ (15) ಮೃತಪಟ್ಟ ದುರ್ದೈವಿಗಳು. ನಿನ್ನೆ ಮಧ್ಯಾಹ್ನ ಈ ಮೂವರು ನರಗುಂದದಿಂದ ಕೊಪ್ಪಳದ ಕಡೆಗೆ ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ 63ರ ಬನ್ನಿಕೊಪ್ಪ ಗ್ರಾಮದ ಬಳಿ ನಿಂತಿದ್ದ ಟಾಟಾ ಏಸ್ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಮೂವರೂ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಕುಕನೂರು ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರ-ರಿಗೆ ಹಸ್ತಾಂತರಿಸಲಾಯಿತು. ಈ ಕುರಿತು ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಭಾರತ-ನ್ಯೂಜಿಲ್ಯಾಂಡ್ ಕ್ರಿಕೆಟ್ ಪಂದ್ಯಗಳಿಗೆ 48 ಗಂಟೆಯಲ್ಲಿ 26 ಸಾವಿರ ಟಿಕೆಟ್ ಮಾರಾಟ

ವೆಲ್ಲಿಂಗ್ಟನ್: ಭಾರತದ ಮುಂಬರುವ ಬಹು-ಸ್ವರೂಪದ ನ್ಯೂಜಿಲೆಂಡ್ ಪ್ರವಾಸಕ್ಕೆ ಅಭೂತಪೂರ್ವ ಆರಂಭಿಕ ಬೇಡಿಕೆ ವ್ಯಕ್ತವಾಗಿದ್ದು, ಆತಿಥೇಯ ಮಂಡಳಿಯ ಪೂರ್ವ-ಮಾರಾಟದ ಮೊದಲ 48 ಗಂಟೆಗಳಲ್ಲೇ 26,000 ಟಿಕೆಟ್‌ಗಳು ಮಾರಾಟವಾಗಿವೆ. ಅಕ್ಟೋಬರ್‌ನಲ್ಲಿ ಆರಂಭವಾಗಲಿರುವ 12 ಪಂದ್ಯಗಳ ಪ್ರವಾಸವು ನ್ಯೂಜಿಲೆಂಡ್ ಕ್ರಿಕೆಟ್‌ನ 'ಕ್ರಿಕೆಟ್ ನೇಷನ್' ಸದಸ್ಯರ ಪೂರ್ವ-ಮಾರಾಟದಲ್ಲಿ ಅತ್ಯಧಿಕ ಬೇಡಿಕೆ ಕಂಡಿರುವ ಸರಣಿಯಾಗಿ ಹೊರಹೊಮ್ಮಿದೆ.

ಆಕ್ಲೆಂಡ್‌ನ ಈಡನ್ ಪಾರ್ಕ್‌ನಲ್ಲಿ ನಡೆಯಲಿರುವ ಸೀಮಿತ ಓವರ್‌ಗಳ ಪಂದ್ಯಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು, ಕ್ರೈಸ್ಟ್‌ಚರ್ಚ್ ಹಾಗೂ ವೆಲ್ಲಿಂಗ್ಟನ್‌ನಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.9,000 ಆಸನಗಳ ಸಾಮರ್ಥ್ಯ ಹೊಂದಿರುವ ಕ್ರೈಸ್ಟ್‌ಚರ್ಚ್‌ನ ಹ್ಯಾಗ್ಲಿ ಓವಲ್‌ನಲ್ಲಿ ಅಕ್ಟೋಬರ್ 22 ಮತ್ತು 24ರಂದು ನಡೆಯಲಿರುವ ಮೊದಲ ಎರಡು ಟಿ20 ಅಂತರರಾಷ್ಟ್ರೀಯ ಪಂದ್ಯಗಳು ಹಾಗೂ ನವೆಂಬರ್ 27ರಿಂದ ಡಿಸೆಂಬರ್




1ರವರೆಗೆ ನಡೆಯಲಿರುವ ಎರಡನೇ ಮತ್ತು ಅಂತಿಮ ಟೆಸ್ಟ್ ಪಂದ್ಯಕ್ಕೆ ಟಿಕೆಟ್‌ಗಳು ಸಂಪೂರ್ಣವಾಗಿ ಮಾರಾಟವಾಗುವ ನಿರೀಕ್ಷೆಯಿದೆ. ವೆಲ್ಲಿಂಗ್ಟನ್‌ನಲ್ಲಿ ನಡೆಯಲಿರುವ ಮೂರನೇ ಟಿ20ಐ ಹಾಗೂ ಎರಡನೇ ಏಕದಿನ ಪಂದ್ಯಕ್ಕೂ ಆರಂಭಿಕ ಮಾರಾಟ ಉತ್ತಮವಾಗಿದೆ. ಇದೇ ವೇಳೆ, ನವೆಂಬರ್ 19ರಿಂದ ಬೇಸಿನ್ ರಿಸರ್ವ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದೆ.ಅಭಿಮಾನಿಗಳು ಟಿಕೆಟ್‌ಗಳನ್ನು ಮುಂಚಿತವಾಗಿ ಪಡೆದುಕೊಳ್ಳುವಂತೆ ನೀಡಿದ್ದ ಕರೆಗೆ ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ ಎಂದು ನ್ಯೂಜಿಲೆಂಡ್ ಕ್ರಿಕೆಟ್‌ನ ಮುಖ್ಯ ಮಾರ್ಕೆಟಿಂಗ್ ಮತ್ತು ವಾಣಿಜ್ಯ ಅಧಿಕಾರಿ ಗ್ಲೆನ್ ಕ್ರೆಚ್ಲಿ ತಿಳಿಸಿದ್ದಾರೆ.

ಭಾರತವನ್ನು ಒಳಗೊಂಡ ಕ್ರಿಕೆಟ್ ಸರಣಿಯ ಉತ್ಸಾಹವನ್ನು ಅನುಭವಿಸಲು ಹಾಗೂ ವಿಶ್ವದ ಕೆಲವು ಶ್ರೇಷ್ಠ ಕ್ರಿಕೆಟಿಗರು ಕಣಕ್ಕಿಳಿಯುವುದನ್ನು ವೀಕ್ಷಿಸಲು ನ್ಯೂಜಿಲೆಂಡ್ ಅಭಿಮಾನಿಗಳಿಗೆ ಇದೊಂದು ಅಪರೂಪದ ಅವಕಾಶವಾಗಿದೆ ಎಂದು ಅವರು ಹೇಳಿದ್ದಾರೆ. ಹಿಂದಿನ ಋತುವಿನ ಬೆಲೆಗಳನ್ನೇ ಈ ಬಾರಿಯೂ ಮುಂದುವ-ರಿಸಲಾಗಿದ್ದು, 'ಕ್ರಿಕೆಟ್ ನೇಷನ್' ಪ್ರವೇಶ ಕೋಡ್ ಬಳಸುವ ಸದಸ್ಯರಿಗೆ ಟಿಕೆಟ್‌ಗಳಲ್ಲಿ ಶೇ.15ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಸಾರ್ವಜನಿಕ ಟಿಕೆಟ್ ಮಾರಾಟ ಸೆಪ್ಟೆಂಬರ್ 7ರಂದು ಆರಂಭವಾಗಲಿದೆ. ಕ್ರಿಕೆಟ್ ನೇಷನ್‌ಗೆ ನೋಂದಾಯಿಸಿಕೊಳ್ಳುವ ಮೂಲಕ ಅಭಿಮಾನಿಗಳು ಪೂರ್ವ-ಮಾರಾಟದ ಅವಕಾಶ ಪಡೆಯಬಹುದು. ಸಾರ್ವಜನಿಕ ಮಾರಾಟ ಆರಂಭವಾಗಲು ಇನ್ನೂ 11 ದಿನಗಳಿರುವುದ-ರಿಂದ, ಅಭಿಮಾನಿಗಳು ಮುಂಚಿತವಾಗಿಯೇ ಟಿಕೆಟ್ ಕಾಯ್ದಿರಿಸುವಂತೆ ನ್ಯೂಜಿಲೆಂಡ್ ಕ್ರಿಕೆಟ್ ಮನವಿ ಮಾಡಿದೆ.

# 1 ಲಕ್ಷ ಮರಗಳಿಗೆ ರಾಖಿ ಕಟ್ಟಿ 'ರಕ್ಷಾ ಬಂಧನ್' ಆಚರಣೆ

ರಾಂಚಿ: ಮಾನವ ಮತ್ತು ಪ್ರಕೃತಿಯ ನಡುವಿನ ಭಾವನಾತ್ಮಕ ಬಾಂಧವ್ಯವನ್ನು ಬಲಪಡಿಸುವ ಉದ್ದೇಶದಿಂದ ರಕ್ಷಾ ಬಂಧನದ ಸಂದರ್ಭದಲ್ಲಿ ಜಾರ್ಖಂಡ್‌ನ 700 ಹಳ್ಳಿಗಳ ಸಾವಿರಾರು ಗ್ರಾಮಸ್ಥರು ನಾಳೆ ಸುಮಾರು ಒಂದು ಲಕ್ಷ ಮರಗಳಿಗೆ ರಾಖಿ ಕಟ್ಟಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

24 ಜಿಲ್ಲೆಗಳ ಆಯ್ದ ಹಳ್ಳಿಗಳಲ್ಲಿ ಮೂರು ಲಕ್ಷ ಮರಗಳಿಗೆ ರಾಖಿ ಕಟ್ಟುವ ಗುರಿಯೊಂದಿಗೆ ಒಂದು ತಿಂಗಳ ಕಾಲ ನಡೆಯಲಿರುವ 'ಮರ ಉಳಿಸಿ' ಅಭಿಯಾನದ ಭಾಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಸಂಜೀವ್ ಕುಮಾರ್ ಪಿಟಿಐಗೆ ತಿಳಿಸಿದ್ದಾರೆ.

ಗುಮ್ಲಾ ಜಿಲ್ಲೆಯ ಜೋರಾದ್ ಗ್ರಾಮದಲ್ಲಿ ನಾಳೆ ಮರಕ್ಕೆ ರಾಖಿ ಕಟ್ಟುವ ಮೂಲಕ ಕುಮಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. "ರಕ್ಷಾ ಬಂಧನವು ಸಹೋದರ-ಸಹೋದರಿಯರ ನಡುವಿನ ಬಾಂಧವ್ಯದ ಹಬ್ಬ. ಈ ದಿನ ಸಹೋದರರು ತಮ್ಮ ಸಹೋದ-ರಿಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡುತ್ತಾರೆ. ಅದೇ ರೀತಿ, ನಮ್ಮ ಜೀವನ ಅವಲಂಬಿಸಿರುವ ಪರಿಸರವನ್ನು ರಕ್ಷಿಸುವುದು ನಮ್ಮ ಅತ್ಯುನ್ನತ ಕರ್ತವ್ಯವಾಗಿದೆ" ಎಂದು ಕುಮಾರ್ ಹೇಳಿದ್ದಾರೆ. ಜನರು ಪ್ರಕೃತಿಯೊಂದಿಗೆ ಭಾವನಾತ್ಮಕವಾಗಿ ಬೆರೆಯುವಂತೆ ಮಾಡುವುದು ಈ ಅಭಿಯಾನದ ಉದ್ದೇಶವಾಗಿದೆ. ರಾಖಿ ಕಟ್ಟುವ ಮೂಲಕ ಮರಗಳನ್ನು ಸಂರಕ್ಷಿಸುವ ಪ್ರತಿಜ್ಞೆ ಮಾಡಲಾಗುತ್ತದೆ. ರಕ್ಷಾ ಬಂಧನದ ದಿನ 700 ಹಳ್ಳಿಗಳ ಸುಮಾರು ಒಂದು ಲಕ್ಷ ಮರಗಳಿಗೆ ರಾಖಿ ಕಟ್ಟುವ ಗುರಿ ಹೊಂದಲಾಗಿದ್ದು, ಒಂದು ತಿಂಗಳ ಅವಧಿಯಲ್ಲಿ 24 ಜಿಲ್ಲೆಗಳ ಸುಮಾರು ಮೂರು ಲಕ್ಷ ಮರಗಳಿಗೆ ರಾಖಿ ಕಟ್ಟಲಾಗುವುದು ಎಂದು ಅವರು



ತಿಳಿಸಿದ್ದಾರೆ.

**2004ರಲ್ಲಿ ಆರಂಭವಾದ ಅಭಿಯಾನ**

ಕುಮಾರ್ ಅವರ ಪರಿಕಲ್ಪನೆಯ ಈ ಉಪಕ್ರಮವು 2004ರಲ್ಲಿ ಧನ್ಬಾದ್ ಜಿಲ್ಲೆಯ ತುಂಡಿ ಬ್ಲಾಕ್‌ನ ಮಾವೋವಾದಿ ಪೀಡಿತ ಲುಕೈಯಾ ಗ್ರಾಮದಿಂದ ಆರಂಭವಾಯಿತು. ಅಂದಿನಿಂದ ರಾಜ್ಯಾದ್ಯಂತ 12,000ಕ್ಕೂ ಹೆಚ್ಚು ಹಳ್ಳಿಗಳನ್ನು ಈ ಕಾರ್ಯಕ್ರಮದೊಂದಿಗೆ ಸಂಪರ್ಕಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಈ ಉಪಕ್ರಮದ ಮೂಲಕ ಲುಕೈಯಾ ಗ್ರಾಮದಲ್ಲಿ 20,000ಕ್ಕೂ ಹೆಚ್ಚು ಮಹುವಾ ಮರಗಳನ್ನು ಸಂರಕ್ಷಿಸಲಾಗಿದೆ. ಈ ಮರಗಳು ಈಗ ಗ್ರಾಮಸ್ಥರ ಜೀವನೋಪಾಯಕ್ಕೆ ಗಮನಾರ್ಹ ಕೊಡುಗೆ ನೀಡುತ್ತಿವೆ. ಇದು ಒಂದೇ ಗ್ರಾಮದ ಉದಾಹರಣೆಯಲ್ಲ. ಈ ಅಭಿಯಾನದಿಂದ ಹಲವು ಹಳ್ಳಿಗಳಲ್ಲಿ ಸಣ್ಣ ಅರಣ್ಯ ಉತ್ಪನ್ನಗಳ ಲಭ್ಯತೆ ಹೆಚ್ಚಿದ್ದು, ಅವು ಗ್ರಾಮಸ್ಥರ ಜೀವನೋಪಾಯಕ್ಕೆ ನೆರವಾಗಿವೆ ಎಂದು ಕುಮಾರ್ ತಿಳಿಸಿದ್ದಾರೆ. ಜಾರ್ಖಂಡ್‌ನ ಅರಣ್ಯ ವ್ಯಾಪ್ತಿಯನ್ನು ಹೆಚ್ಚಿಸುವಲ್ಲಿಯೂ ಈ ಉಪಕ್ರಮ ಮಹತ್ವದ ಪಾತ್ರ ವಹಿಸಿದೆ ಎಂದು ಅವರು ಹೇಳಿದ್ದಾರೆ.

# ನೂಲಿನ ರಕ್ಷೆಯ ಬಂಧನ..,ರಕ್ಷಾ ಬಂಧನ



ಒಡಹುಟ್ಟಿದವರ ನಡುವಣ ಪ್ರೀತಿಯ ಬಾಂಧವ್ಯವನ್ನು ಹೆಚ್ಚಿಸುವ ಹಲವಾರು ಹಬ್ಬಗಳಲ್ಲಿ ರಕ್ಷಾ ಬಂಧನ ಹಬ್ಬವು ಒಂದು. ಶ್ರಾವಣ ಮಾಸದ ಪೂರ್ಣಿಮೆಯ ದಿನ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಪಂಚಮಿಯ ಸಮಯದಲ್ಲಿಯೂ ಕೂಡ ಹೆಣ್ಣು ಮಕ್ಕಳು ತಮ್ಮ ತವರಿಗೆ ತೆರಳಿ ತಮ್ಮ ಸಹೋದರರ ಒಳ್ಳೆಯ ಆರೋಗ್ಯ ಆಯುಷ್ಯ ಹಾಗೂ ಸಂಪತ್ತಿನ ಅಭಿವೃದ್ಧಿಗೆ ದೇವರನ್ನು ಪೂಜಿಸುವ ಹಬ್ಬವು ಇದೆ. ನಂತರ ಬರುವುದೇ ಶ್ರಾವಣ ಮಾಸದ ನೂಲ ಹುಣ್ಣಿಮೆಯ ದಿನದ ರಕ್ಷಾಬಂಧನ ಹಬ್ಬ. ಕೇವಲ ಒಂದು ಪುಟ್ಟ ನೂಲಿನ ಎಳೆಯನ್ನು ಸಹೋದರರ ಕೈಗೆ ಕಂಕಣ ರೂಪದಲ್ಲಿ ಕಟ್ಟುವ ಸಹೋದರಿಯರು ಸದಾ ಪ್ರೀತಿ, ವಾತ್ಸಲ್ಯ, ಬಾಂಧವ್ಯ ಹಾಗೂ ರಕ್ಷಣೆಯ ಭಾವವನ್ನು ತಮ್ಮ ಸಹೋದರರಿಂದ ಕೋರುವ ಹಬ್ಬವೇ ನೂಲ ಹುಣ್ಣಿಮೆ.

ಹಿಂದೆ ಮಹಾಭಾರತ ಕಾಲದಲ್ಲಿ ಒಂದೊಮ್ಮೆ ಕೃಷ್ಣ ಭಗವಾನ ತನ್ನ ಕೈಯ ಬೆರಳಿಗೆ ಗಾಯವನ್ನು ಮಾಡಿಕೊಂಡಾಗ ಎಲ್ಲ ಪಾಂಡವರು ಗಾಬರಿಯಿಂದ ಚಿಕಿತ್ಸೆ ಮಾಡಲು ಓಡಾಡಿದರೆ ದ್ರೌಪದಿ ತನ್ನ ಸೀರೆಯ ಸೆರಗನ್ನು ಹರಿದು ಅದನ್ನು ಕೃಷ್ಣನ ಬೆರಳಿಗೆ ಸುತ್ತಿ ರಕ್ತಸ್ರಾವವನ್ನು ನಿಲ್ಲಿಸಿದಳು. ದ್ರೌಪದಿಯ ಈ ಪರಿಯ ಪ್ರೀತಿಯನ್ನು ಕಂಡು ಕೃಷ್ಣ ಭಗವಾನನು ವಾತ್ಸಲ್ಯದಿಂದ ಸಹೋದರಿ ದ್ರೌಪದಿಗೆ ಆಕೆಯ ಕಷ್ಟ ಕಾಲದಲ್ಲಿ ತಾನು ಸದಾ ಹಾಜರಿದ್ದು ಆಕೆಯನ್ನು ಅನವರತ ರಕ್ಷಿಸುತ್ತೇನೆ ಎಂದು ಮಾತು ಕೊಟ್ಟನು. ಅಂತೆಯೇ ಮತ್ತೊಂದು ಪ್ರಸಂಗದಲ್ಲಿ ಇಂದ್ರದೇವನ ರಾಕ್ಷಸರೊಂದಿಗೆ ಯುದ್ಧದಲ್ಲಿ ತೊಡಗುವ ಸಮಯದಲ್ಲಿ ಆತನ ಪತ್ನಿ ಶಚಿದೇವಿಯು ಆತನ ಹಣೆಗೆ ಮಂಗಳ ತಿಲಕವನ್ನು ಇಟ್ಟು ರಕ್ಷೆಯ ಕಂಕಣ ಕಟ್ಟಿ ಗೆಲುವನ್ನು ಹಾರೈಸಿದಳು ಎಂಬುದನ್ನು ನಾವು ಕಾಣುತ್ತೇವೆ.

ಇನ್ನು ಮಧ್ಯಕಾಲೀನ ಸಮಯದಲ್ಲಿ ಮೇವಾಡ ರಾಜ್ಯದ ಮಹಾರಾಣಿ ಕರ್ಣಾವತಿಯು ಗುಜರಾತ ಸುಲ್ತಾನರ ದಾಳಿಯನ್ನು ಎದುರಿಸಲು ಮೊಘಲ ಅರಸ ಹುಮಾಯೂನನಿಗೆ ರಕ್ಷಾಬಂಧನದ ನೂಲನ್ನು ಕಳುಹಿಸಿ ಸಹಾಯ ಕೋರಿದ್ದಳು. 1905ರಲ್ಲಿ ಬಂಗಾಳ ವಿಭಜನೆಯ ಕಾಲದಲ್ಲಿ ರವೀಂದ್ರನಾಥ ಟಾಗೋರರು ಬಂಗಾಳ ವಿಭಜನೆಯ ಸಮಯದಲ್ಲಿ, ಹಿಂದೂ ಮತ್ತು ಮುಸ್ಲಿಮರ ನಡುವೆ ಐಕ್ಯತೆ ಹಾಗೂ ಸಹೋದರತ್ವ ಮೂಡಿಸಲು ರಕ್ಷಾ ಬಂಧನ ಹಬ್ಬವನ್ನು ಬಳಸಿಕೊಂಡರು. ರಕ್ಷಾ ಬಂಧನದ ಪರಿಕಲ್ಪನೆಯು ಮುಖ್ಯವಾಗಿ ರಕ್ಷಣೆಯ ಕುರಿತಾಗಿದೆ. ಸಾಮಾನ್ಯವಾಗಿ ಜನರು ದೇವಾಲಯಗಳಲ್ಲಿ ಅರ್ಚಕರ ಬಳಿಗೆ ಹೋಗಿ ತಮ್ಮ ಕೈಗಳಿಗೆ ಪವಿತ್ರ ದಾರವನ್ನು ಕಟ್ಟಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ವಾರಣಾಸಿಯ ಕಾಲ ಭೈರವ ದೇವಾಲಯದಲ್ಲಿ ಜನರು ತಮ್ಮ ಮಣಿಕಟ್ಟಿಗೆ ಕಪ್ಪು ದಾರವನ್ನು ಕಟ್ಟಿಕೊಳ್ಳುತ್ತಾರೆ. ಅದೇ ರೀತಿ ಜಮ್ಮುವಿನ ಶ್ರೀ ವೈಷ್ಣೋದೇವಿ ದೇವಾಲಯದಲ್ಲಿ, ದೇವಿಯನ್ನು ಪೂಜಿಸಿದ ನಂತರ ಜನರು ಹಣೆಗೆ ಕೆಂಪು ಪಟ್ಟಿಯನ್ನು ಕಟ್ಟಿಕೊಳ್ಳುವುದನ್ನು ನಾವು ಕಾಣುತ್ತೇವೆ. ಹಿಂದೂ ಧಾರ್ಮಿಕ ಕಾರ್ಯಗಳಲ್ಲಿ, ಧಾರ್ಮಿಕ ಆಚರಣೆಯನ್ನು ಪ್ರಾರಂಭಿಸುವ ಮೊದಲು ಪೀಠಾಧಿಪತಿಯು ಆ ಆಚರಣೆಯನ್ನು ನಿರ್ವಹಿಸುವ ವ್ಯಕ್ತಿಯ ಮಣಿಕಟ್ಟಿಗೆ ದಾರವನ್ನು ಕಟ್ಟುವುದನ್ನು ನಾವು ಗಮನಿಸುತ್ತೇವೆ. ಇದನ್ನು ಕಂಕಣ ಎಂದು ಕರೆಯುತ್ತೇವೆ.


ಯಜ್ಞೋಪವೀತ (ಎದೆಯಾದ್ಯಂತ ಪವಿತ್ರ ದಾರ) ಕೂಡ ಅದರ ಪಾವಿತ್ರ್ಯವನ್ನು ಕಾಪಾಡಿಕೊಂಡರೆ ಅದನ್ನು ಧರಿಸುವವರಿಗೆ ರಕ್ಷಣೆ ನೀಡುತ್ತದೆ ಎಂದು ನಂಬಲಾಗಿದೆ ಮತ್ತು ಹೇಳಲಾಗುತ್ತದೆ. ವಿವಾಹದ ಪರಿಕಲ್ಪನೆಯಲ್ಲಿ, ವರನು ವಧುವಿಗೆ ಮಂಗಳ ಸೂತ್ರ (ವಧುವಿನ ಕುತ್ತಿಗೆಗೆ ಕಟ್ಟುವುದು)ವನ್ನು ಕಟ್ಟುವ ಮುನ್ನ ಪರಸ್ಪರರ ಕೈಗಳಿಗೆ ಕಂಕಣ ಬಂಧನ (ವಧು ಮತ್ತು ವರನ ಮಣಿಕಟ್ಟಿಗೆ ಪರಸ್ಪರ ಕಟ್ಟುವ ದಾರ) ಕಟ್ಟುವ ಮೂಲಕ ತಮ್ಮ ಸಂಬಂಧದಲ್ಲಿ ಕಂಕಣ ಬದ್ಧರಾಗಿರಲು ಎಲೆ ಅರಿಶಿಣದ ಕೊಂಬು ಹಾಗೂ ದಾರದ ಸಹಾಯದಿಂದ ಕಂಕಣವನ್ನು ಕಟ್ಟುತ್ತಾರೆ.

ರಾಖಿ ಕಟ್ಟುವುದು ಕೇವಲ ಸಹೋದರ ಸಹೋದರಿಗೆ ಮಾತ್ರ ಸೀಮಿತವಲ್ಲ. ಇದನ್ನು ಹೆಂಡತಿ ತನ್ನ ಗಂಡನಿಗೆ ಅಥವಾ ಶಿಷ್ಯ ಗುರುವಿಗೆ ಕೂಡ ಕಟ್ಟಬಹುದು. ಈ ಬಂಧವು ರಕ್ತಸಂಬಂಧಿಗಳ ನಡುವೆ ಇರಬೇಕಾಗಿಲ್ಲ. ಹುಡುಗಿ ರಾಖಿ ಕಟ್ಟುವ ಮೂಲಕ ಹುಡುಗನನ್ನು ತನ್ನ ಸಹೋದರನನ್ನಾಗಿ ದತ್ತು ಪಡೆಯಬಹುದು. ಈ ಆಚರಣೆಯು ಪ್ರೀತಿಯ ಬಂಧವನ್ನು ಬಲಪಡಿಸುವುದಲ್ಲದೆ, ಕುಟುಂಬದ ಗಡಿಗಳನ್ನು ಮೀರುತ್ತದೆ. ಆಪ್ತ ಸ್ನೇಹಿತರು ಮತ್ತು ನೆರೆಹೊರೆಯವರ ಮಣಿಕಟ್ಟಿನ ಮೇಲೆ ರಾಖಿಯನ್ನು ಕಟ್ಟಿದಾಗ, ಅದು ಸಾಮರಸ್ಯದ ಸಾಮಾಜಿಕ ಜೀವನದ ಅಗತ್ಯವನ್ನು ಒತ್ತಿಹೇಳುತ್ತದೆ. ಇದು ಒಬ್ಬರ ಸ್ವಂತ ಕುಟುಂಬದ ಗಡಿಗಳನ್ನು ಮೀರಿ ಇಡೀ ಭೂಮಿಯು ಒಂದೇ ಕುಟುಂಬವಾಗಿ ಅವರ ದೃಷ್ಟಿಕೋನವನ್ನು ವಿಸ್ತರಿಸಲು ಸಹಾಯ ಮಾಡುತ್ತದೆ - ವಸುಧೈವ ಕುಟುಂಬಕಂ ಎಂಬ ಸನಾತನ ಭಾರತೀಯ ಕಲ್ಪನೆಯನ್ನು ಮೂಡಿಸುತ್ತದೆ. ಭಾರತೀಯ ಧಾರ್ಮಿಕ ನಂಬಿಕೆಗಳ ಪ್ರಕಾರ, ಶಿವನನ್ನು ತಂದೆಯಾಗಿ ಮತ್ತು ಪಾರ್ವತಿ ದೇವಿಯನ್ನು ತಾಯಿಯಾಗಿ ಪರಿಗಣಿಸಲಾಗುತ್ತದೆ. ಭಗವಂತನ ಭಕ್ತರು ನನ್ನ ಸಂಬಂಧಿಕರು, ಮತ್ತು ನಾನು ಮೂರು ಲೋಕಗಳಿಗೂ ಸೇರಿದವನು. ತಾಯಿ ಪಾರ್ವತಿ ದೇವಿ, ದೇವರು ನಿಮ್ಮನ್ನು ಆಶೀರ್ವದಿಸಲಿ. ಬಾಂಧವಃ ಶಿವ ಭಕ್ತಶ್ಚ ಸ್ವದೇಶೋ ಭುವನ-ತ್ರಯಮ್ ಎಂದು ಪ್ರಾರ್ಥಿಸುತ್ತೇವೆ. ಎಲ್ಲರಿಗೂ ರಕ್ಷಾಬಂಧನದ ಶುಭಾಶಯಗಳು



ವೀಣಾ ಹೇಮಂತ್ ಗೌಡ ಪಾಟೀಲ್

# ರಕ್ಷಾ ಬಂಧನ : ಪ್ರೀತಿಯ ನೂಲಿನಲ್ಲಿ ಮಾನವೀಯತೆಯ ಬಂಧನ



ರಕ್ಷಾ ಬಂಧನವೆಂದರೆ ಕೇವಲ ಅಣ್ಣ-ತಂಗಿ, ಅಕ್ಕ-ತಮ್ಮನ ಕೈಗೆ ರಾಖಿ ಕಟ್ಟುವ ಒಂದು ದಿನವಲ್ಲ; ಅದು ಪ್ರೀತಿ, ವಿಶ್ವಾಸ, ಪರಸ್ಪರ ಗೌರವ, ಭಾವನಾತ್ಮಕ ಭದ್ರತೆ ಮತ್ತು ಮಾನವೀಯ ಸಂಬಂಧಗಳ ಮೌಲ್ಯವನ್ನು ನೆನಪಿಸುವ ಅರ್ಥಪೂರ್ಣ ಆಚರಣೆ. ರಾಖಿಯ ದಾರವು ನೋಡಲು ಅತಿ ಸರಳವಾದ ನೂಲು. ಆದರೆ ಅದರೊಳಗೆ ಅಡಗಿರುವ ಭಾವನೆ ಅಪಾರ. ಅಣ್ಣ-ತಂಗಿ, ಅಕ್ಕ-ತಮ್ಮನ ನಡುವಿನ ಪ್ರೀತಿ ಮತ್ತು ಮಧುರ ಭಾವೈಕ್ಯತೆಯ ಸಂಕೇತವಾಗಿ ಆರಂಭವಾದ ಈ ಆಚರಣೆ, ಕಾಲಕ್ರಮೇಣ ವಿಶಾಲವಾದ ಸಾಮಾಜಿಕ ಹಾಗೂ ಮಾನವೀಯ ಅರ್ಥವನ್ನು ಪಡೆದುಕೊಂಡಿದೆ. ಬದುಕಿರುವ ಪ್ರತಿಯೊಬ್ಬರೂ ಒಬ್ಬರಿಗೊಬ್ಬರು ಆದರ್ಶ ವ್ಯಕ್ತಿತ್ವವಾಗಿ, ಕಷ್ಟದಲ್ಲಿ ಹೆಗಲಾಗಿಯಾಗಿ, ಸಂತೋಷದಲ್ಲಿ ಜೊತೆಯಾಗಿ ನಿಲ್ಲಬೇಕು ಎಂಬ ಆಶಯವನ್ನು ಈ ಹಬ್ಬ ಸಾರುತ್ತದೆ.

ರಕ್ಷಾ ಬಂಧನದ ಮೂಲಭಾವನೆಯನ್ನು ಗಮನಿಸಿದಾಗ 'ರಕ್ಷಣೆ' ಎಂಬ ಪದಕ್ಕೆ ವಿಶಾಲವಾದ ಅರ್ಥ ನೀಡಬೇಕಾಗುತ್ತದೆ. ರಕ್ಷಣೆ ಎಂದರೆ ಕೇವಲ ಸಹೋದರನು ಸಹೋದರಿಯನ್ನು ಕಾಪಾಡುವುದು ಎಂಬ ಏಕಮುಖ ಕಲ್ಪನೆಯಲ್ಲ. ಇಂದಿನ ವೈಚಾರಿಕ ಸಮಾಜದಲ್ಲಿ ರಕ್ಷಣೆ ಪರಸ್ಪರ ಜವಾಬ್ದಾರಿಯಾಗಿದೆ. ಅಕ್ಕ ತನ್ನ ತಮ್ಮನಿಗೆ, ತಂಗಿ ತನ್ನ ಅಣ್ಣನಿಗೆ, ಅಣ್ಣ ತನ್ನ ತಂಗಿಗೆ, ತಮ್ಮ ತನ್ನ ಅಕ್ಕನಿಗೆ ಮಾನಸಿಕವಾಗಿ, ನೈತಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಂಬಲವಾಗುವುದು ನಿಜವಾದ ರಕ್ಷಣೆ. ಜೀವನದ ಸಂಕಷ್ಟಗಳಲ್ಲಿ 'ನಾನು ನಿನ್ನೊಂದಿಗಿದ್ದೇನೆ' ಎಂಬ ಭರವಸೆ ನೀಡುವುದೇ ರಾಖಿಯ ನಿಜವಾದ ಅರ್ಥ. ರಾಖಿಯ ದಾರವು ಸಂಬಂಧದ ಸಂಕೇತವಾಗಿದ್ದರೂ ಅದರ ಸಂದೇಶವು ರಕ್ತಸಂಬಂಧದ ಗಡಿಯನ್ನು ಮೀರುತ್ತದೆ. ಮಾನವ ಸಮಾಜದಲ್ಲಿ ಜಾತಿ, ಮತ, ಧರ್ಮ, ಭಾಷೆ, ಪ್ರದೇಶ, ಆರ್ಥಿಕ ಸ್ಥಿತಿ ಮುಂತಾದ ವಿಭಜನೆಗಳು ಮನುಷ್ಯರನ್ನು ದೂರ ಮಾಡುತ್ತವೆ. ಆದರೆ ಪ್ರೀತಿ ಮತ್ತು ಮಾನವೀಯತೆ ಇವುಗಳನ್ನೆಲ್ಲ ಮೀರಿ ಮನುಷ್ಯರನ್ನು ಹತ್ತಿರ ತರಬಲ್ಲವು. ಹೀಗಾಗಿ ರಕ್ಷಾ ಬಂಧನವನ್ನು ವಿಶ್ವಬಂಧುತ್ವದ ಸಂಕೇತವಾಗಿಯೂ ನೋಡಬಹುದು. ಪರಸ್ಪರ ಗೌರವದಿಂದ ಬದುಕುವ ಸಮಾಜದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರ ಸುರಕ್ಷತೆ ಮತ್ತು ಗೌರವದ ಬಗ್ಗೆ ಕಾಳಜಿ ವಹಿಸಬೇಕು ಎಂಬ ಸಂದೇಶವನ್ನು ಈ ಹಬ್ಬ ನೀಡುತ್ತದೆ.

ವಿಶೇಷವಾಗಿ ಮಹಿಳೆಯರ ಸುರಕ್ಷತೆ ಮತ್ತು ಗೌರವದ ವಿಚಾರದಲ್ಲಿ ರಕ್ಷಾ ಬಂಧನದ ವೈಚಾರಿಕತೆಯನ್ನು ಹೊಸ ದೃಷ್ಟಿಕೋನದಿಂದ ಅರ್ಥೈಸಬೇಕಾಗಿದೆ. ಮಹಿಳೆಯನ್ನು ಕೇವಲ 'ರಕ್ಷಿಸಬೇಕಾದವಳು' ಎಂದು ನೋಡುವುದಕ್ಕಿಂತ, ಸಮಾನ ಹಕ್ಕು, ಸ್ವಾತಂತ್ರ್ಯ ಮತ್ತು ಗೌರವ ಹೊಂದಿರುವ ವ್ಯಕ್ತಿಯಾಗಿ ಕಾಣುವುದು ಮುಖ್ಯ. ಮಹಿಳೆಯ ಮೇಲೆ ಯಾವುದೇ ರೀತಿಯ ಅನ್ಯಾಯ ನಡೆಯದಂತೆ ಸಮಾಜದ ಪ್ರತಿಯೊಬ್ಬರೂ ಹೊಣೆಗಾರಿಕೆ ವಹಿಸಬೇಕು. ಶಾಲೆ, ಮನೆ, ಕೆಲಸದ ಸ್ಥಳ, ಸಾರ್ವಜನಿಕ ಸ್ಥಳ ಎಲ್ಲೆಡೆ ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಕರ್ತವ್ಯ. ಈ ಅರ್ಥದಲ್ಲಿ ರಕ್ಷಾ ಬಂಧನವು ಲಿಂಗ ಸಮಾನತೆ ಮತ್ತು ಪರಸ್ಪರ ಗೌರವದ ಚಿಂತನೆಗೆ ದಾರಿ ಮಾಡಿಕೊಡಬಲ್ಲದು. ಅಣ್ಣ-ತಂಗಿಯ ಸಂಬಂಧದಲ್ಲಿ ಪ್ರೀತಿ ಮಾತ್ರವಲ್ಲ, ಪರಸ್ಪರ ಗೌರವವೂ ಅಗತ್ಯ. ಅಣ್ಣ ತನ್ನ ತಂಗಿಯ ಕನಸುಗಳಿಗೆ ಬೆಂಬಲ ನೀಡಬೇಕು; ತಂಗಿಯೂ ತನ್ನ ಅಣ್ಣನ ಸಂಕಷ್ಟಗಳಿಗೆ ಧೈರ್ಯ ತುಂಬಬೇಕು. ಅಕ್ಕ ತಮ್ಮನಿಗೆ ದಾರಿ ತೋರಿಸುವವಳಾಗಬಹುದು; ತಮ್ಮ ಅಕ್ಕನ ಆತ್ಮವಿಶ್ವಾಸಕ್ಕೆ ಬೆಂಬಲವಾಗಬಹುದು. ಹೀಗೆ ನೋಡಿದಾಗ ರಕ್ಷಾ ಬಂಧನವು ಅಧಿಕಾರದ ಸಂಬಂಧವಲ್ಲ, ಸಮಾನತೆಯ ಸಂಬಂಧ. ಒಬ್ಬರು ಮತ್ತೊಬ್ಬರ ಮೇಲೆ ಹಕ್ಕು ಸಾಧಿಸುವುದಕ್ಕಿಂತ, ಒಬ್ಬರ ವ್ಯಕ್ತಿತ್ವವನ್ನು ಮತ್ತೊಬ್ಬರು ಗೌರವಿಸುವುದು ಈ ಬಂಧದ ಸಾರ್ಥಕತೆ. ಇಂದಿನ ವೇಗದ ಜೀವನದಲ್ಲಿ ಕುಟುಂಬದ ಸದಸ್ಯರ ನಡುವಿನ ಭೌತಿಕ ಅಂತರ ಹೆಚ್ಚಾಗಿದೆ. ಉದ್ಯೋಗ, ಶಿಕ್ಷಣ, ವೃತ್ತಿ ಮತ್ತು ವಿವಿಧ ಕಾರಣಗಳಿಂದ ಸಹೋದರ-ಸಹೋದರಿಯರು ಬೇರೆ ಬೇರೆ ನಗರಗಳಲ್ಲಿ ಅಥವಾ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ವರ್ಷಪೂರ್ತಿ ಭೇಟಿಯಾಗಲು ಸಾಧ್ಯವಾಗದಿದ್ದರೂ ರಕ್ಷಾ ಬಂಧನದ ದಿನ ಪರಸ್ಪರ ನೆನಪಿಸಿಕೊಳ್ಳುವುದು ಸಂಬಂಧಗಳನ್ನು ಮತ್ತೊಮ್ಮೆ ಜೀವಂತಗೊಳಿಸುತ್ತದೆ. ಒಂದು ರಾಖಿ, ಒಂದು ಶುಭಾಶಯ, ಒಂದು ದೂರವಾಣಿ ಕರೆ ಅಥವಾ ಒಂದು ಸಣ್ಣ ಸಂದೇಶವೂ ಹೃದಯಗಳ ನಡುವಿನ ಅಂತರವನ್ನು ಕಡಿಮೆ ಮಾಡಬಹುದು. ಈ ದೃಷ್ಟಿಯಿಂದ ರಕ್ಷಾ ಬಂಧನವು ಸಂಬಂಧಗಳ ನವೀಕರಣದ ದಿನವೂ ಹೌದು. ಮಾನವನ ಬದುಕಿನಲ್ಲಿ ದೈಹಿಕ ಭದ್ರತೆಯಷ್ಟೇ ಮಾನಸಿಕ ಭದ್ರತೆಯೂ ಮುಖ್ಯ. ಜೀವನದಲ್ಲಿ ಯಾರಾದರೂ ನಮ್ಮ ಬೆನ್ನಿಗೆ ನಿಂತಿದ್ದಾರೆ ಎಂಬ ಭರವಸೆ ವ್ಯಕ್ತಿಯ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಸಂಕಷ್ಟ ಬಂದಾಗ ಸಲಹೆ ನೀಡುವವರು, ನೋವಿನಲ್ಲಿ ಸಾಂತ್ವನ ಹೇಳುವವರು, ತಪ್ಪಾದಾಗ ಸರಿದಾರಿಗೆ ತರುವವರು, ಯಶಸ್ಸಿನಲ್ಲಿ ಸಂತೋಷಪಡುವವರು ನಮ್ಮ ಜೀವನದಲ್ಲಿ ಇರಬೇಕು. ಸಹೋದರ-ಸಹೋದರಿಯರ ಸಂಬಂಧವು ಇಂತಹ ಭಾವನಾತ್ಮಕ ಭದ್ರತೆಯನ್ನು ನೀಡಬಲ್ಲದು. ರಾಖಿ ಕಟ್ಟುವ ಕ್ಷಣದಲ್ಲಿ 'ನಮ್ಮ ಸಂಬಂಧ ಸದಾ ಹೀಗೆಯೇ ಇರಲಿ' ಎಂಬ ಮೌನ ಭರವಸೆ ಮೂಡುತ್ತದೆ.

ರಕ್ಷಾ ಬಂಧನದ ಮತ್ತೊಂದು ಮಹತ್ವದ ವೈಚಾರಿಕ ಅಂಶವೆಂದರೆ ನೈತಿಕ ಜವಾಬ್ದಾರಿ. ರಾಖಿಯ ದಾರವು ಕೈಗೆ ಕಟ್ಟಲ್ಪಟ್ಟರೂ ಅದರ ನಿಜವಾದ ಬಂಧನ ಮನಸ್ಸಿಗೆ ಕಟ್ಟಲ್ಪಡಬೇಕು. ನಾವು ಮತ್ತೊಬ್ಬರಿಗೆ ಅನ್ಯಾಯ ಮಾಡುವುದಿಲ್ಲ, ಅವಮಾನಿಸುವುದಿಲ್ಲ, ಸಂಕಷ್ಟದಲ್ಲಿರುವವರನ್ನು ನಿರ್ಲಕ್ಷಿಸುವುದಿಲ್ಲ, ಮಹಿಳೆಯರ ಗೌರವಕ್ಕೆ ಧಕ್ಕೆ ತರುವುದಿಲ್ಲ, ದುರ್ಬಲರ ಮೇಲೆ ದೌರ್ಜನ್ಯ ಮಾಡುವುದಿಲ್ಲ ಎಂಬ ನೈತಿಕ ಪ್ರತಿಜ್ಞೆಯಾಗಿ ಈ ಹಬ್ಬವನ್ನು ರೂಪಿಸಬಹುದು. ಆಗ ರಾಖಿಯು ಕೇವಲ ಅಲಂಕಾರವಾಗದೆ, ಮೌಲ್ಯಗಳ ನೆನಪಾಗುತ್ತದೆ. ಸಮಾಜದ ಸ್ವಾಸ್ಥ್ಯ ಕೇವಲ ಸರ್ಕಾರದ ಕಾನೂನುಗಳಿಂದ ನಿರ್ಮಾಣವಾಗುವುದಿಲ್ಲ. ನಾಗರಿಕರ ಪರಸ್ಪರ ಬದ್ಧತೆ, ಸಹಕಾರ ಮತ್ತು ಮಾನವೀಯತೆಯಿಂದಲೂ ಅದು ನಿರ್ಮಾಣವಾಗುತ್ತದೆ. ನೆರೆಹೊರೆಯವರ ಕಷ್ಟಕ್ಕೆ ಸ್ಪಂದಿಸುವುದು, ಅಪಘಾತದಲ್ಲಿ ಗಾಯಗೊಂಡವರಿಗೆ ನೆರವಾಗುವುದು, ವೃದ್ಧರಿಗೆ ಸಹಾಯ ಮಾಡುವುದು, ಮಕ್ಕಳ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸುವುದು, ಮಹಿಳೆಯರ ಗೌರವ ಕಾಪಾಡುವುದು, ಪ್ರಕೃತಿಯನ್ನು ಸಂರಕ್ಷಿಸುವುದು?ಇವೆಲ್ಲವೂ ವಿಶಾಲ ಅರ್ಥದಲ್ಲಿ 'ರಕ್ಷಣೆ'ಯ ಭಾಗಗಳೇ. ಹೀಗಾಗಿ ರಕ್ಷಾ ಬಂಧನದ ಸಂದೇಶವನ್ನು ಕುಟುಂಬದಿಂದ ಸಮಾಜದವರೆಗೆ ವಿಸ್ತರಿಸಬೇಕಾಗಿದೆ. ಇಂದಿನ ಮಕ್ಕಳಿಗೆ ರಕ್ಷಾ ಬಂಧನದ ಅರ್ಥವನ್ನು ಕೇವಲ ರಾಖಿ, ಸಿಹಿ ಮತ್ತು ಉಡುಗೊರೆಗಳಿಗೆ ಸೀಮಿತಗೊಳಿಸದೆ ಅದರ ಮೌಲ್ಯವನ್ನು ತಿಳಿಸಬೇಕು. ಅಣ್ಣ-ತಂಗಿಯರು ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಬೇಕು, ಒಬ್ಬರ ವಸ್ತುಗಳನ್ನು ಮತ್ತೊಬ್ಬರು ಗೌರವಿಸಬೇಕು, ಜಗಳವಾದಾಗ ಕ್ಷಮಿಸಿಕೊಳ್ಳಬೇಕು, ಓದು ಮತ್ತು ಜೀವನದ ಗುರಿಗಳಲ್ಲಿ ಪರಸ್ಪರ ಪ್ರೋತ್ಸಾಹಿಸಬೇಕು ಎಂಬ ಸಂಸ್ಕಾರವನ್ನು ಬೆಳೆಸಬೇಕು. ಮಕ್ಕಳಲ್ಲಿ ಬಾಲ್ಯದಿಂದಲೇ ಸಹಾನುಭೂತಿ, ಸಮಾನತೆ ಮತ್ತು ಹೊಣೆಗಾರಿಕೆಯ ಮನೋಭಾವ ಬೆಳೆದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ರಕ್ಷಾ ಬಂಧನವು ಜಾತಿ-ಮತದ ಗಡಿಗಳನ್ನು ಮೀರಿ ಮಾನವೀಯ ಸಂಬಂಧಗಳನ್ನು ಬೆಳೆಸುವ ಅವಕಾಶವೂ ಆಗಬಹುದು. ಒಬ್ಬ ವ್ಯಕ್ತಿ ಮತ್ತೊಬ್ಬರಿಗೆ ರಾಖಿ ಕಟ್ಟುವಾಗ 'ನೀನು ನನ್ನವನು' ಎನ್ನುವುದಕ್ಕಿಂತ 'ನೀನು ನನ್ನ ಸಹೋದರ, ನಾನು ನಿನ್ನ ಸಹೋದರಿ; ನಿನ್ನ ಸಂತೋಷ ಮತ್ತು ಸುರಕ್ಷತೆ ನನಗೂ ಮುಖ್ಯ' ಎಂಬ ಭಾವನೆ ಮೂಡಬೇಕು. ಈ ಭಾವನೆ ಸಮಾಜದ ಎಲ್ಲ ವರ್ಗಗಳಲ್ಲೂ ಬೆಳೆಯಬೇಕು. ಮಾನವೀಯತೆಯ ನೂಲು ಗಟ್ಟಿಯಾದಾಗ ದ್ವೇಷದ ಗೋಡೆಗಳು ದುರ್ಬಲವಾಗುತ್ತವೆ.

ಹಬ್ಬಗಳ ಸಾರ್ಥಕತೆ ಅವುಗಳ ಆಚರಣೆಯಲ್ಲಷ್ಟೇ ಅಲ್ಲ, ಅವು ನೀಡುವ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಲ್ಲಿದೆ. ರಕ್ಷಾ ಬಂಧನದ ದಿನ ರಾಖಿ ಕಟ್ಟಿಕೊಂಡು ಮರುದಿನವೇ ಪರಸ್ಪರ ಗೌರವವನ್ನು ಮರೆತುಬಿಟ್ಟರೆ ಆಚರಣೆ ಅಪೂರ್ಣವಾಗುತ್ತದೆ. ವರ್ಷಪೂರ್ತಿ ಸಹೋದರ-ಸಹೋದರಿಯರ ನಡುವೆ ಪ್ರೀತಿ, ಗೌರವ, ಸಹಕಾರ ಮತ್ತು ನಂಬಿಕೆ ಉಳಿದಾಗ ಮಾತ್ರ ರಾಖಿಯ ದಾರಕ್ಕೆ ಅರ್ಥ ಬರುತ್ತದೆ. ಅದೇ ರೀತಿ ಸಮಾಜದಲ್ಲೂ ಶಾಂತಿ, ಸೌಹಾರ್ದ ಮತ್ತು ಸಹೋದರತ್ವವನ್ನು ನಿರಂತರವಾಗಿ ಕಾಪಾಡಿದಾಗ ಮಾತ್ರ ಈ ಹಬ್ಬದ ನಿಜವಾದ ಉದ್ದೇಶ ಸಾಕಾರಗೊಳ್ಳುತ್ತದೆ. ರಕ್ಷಾ ಬಂಧನವು ಪ್ರಕೃತಿಯೊಂದಿಗೂ ಒಂದು ವಿಶಾಲವಾದ ಸಂಬಂಧವನ್ನು ನೆನಪಿಸಬಹುದು. ನಾವು ಬದುಕಲು ಮರಗಳು, ನೀರು, ಮಣ್ಣು, ಗಾಳಿ ಮತ್ತು ಜೀವಜಾಲದ ಮೇಲೆ ಅವಲಂಬಿತರಾಗಿದ್ದೇವೆ. ಪ್ರಕೃತಿಯ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಒಂದು ಮರವನ್ನು ನೆಟ್ಟು ಅದನ್ನು ಬೆಳೆಸುವುದು, ನೀರನ್ನು ಉಳಿಸುವುದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಜೀವಜಾಲವನ್ನು ಕಾಪಾಡುವುದು ಕೂಡ ಮುಂದಿನ ಪೀಳಿಗೆಯ ಬದುಕನ್ನು ರಕ್ಷಿಸುವ ಕಾರ್ಯವೇ. ಹೀಗಾಗಿ 'ರಕ್ಷಣೆ' ಎಂಬ ಪದವನ್ನು ಮನುಷ್ಯರ ಸಂಬಂಧದಿಂದ ಪರಿಸರದವರೆಗೆ ವಿಸ್ತರಿಸುವ ಅಗತ್ಯವಿದೆ. ರಾಖಿಯ ನೂಲು ದುರ್ಬಲವಾಗಿ ಕಾಣಬಹುದು; ಆದರೆ ಅದನ್ನು ಪ್ರೀತಿಯಿಂದ ಕಟ್ಟಿದಾಗ ಅದು ಬಲವಾದ ಭಾವನಾತ್ಮಕ ಬಂಧನವಾಗುತ್ತದೆ. ಅದೇ ರೀತಿ ಸಮಾಜದಲ್ಲಿನ ಸಣ್ಣ ಸಣ್ಣ ಮಾನವೀಯ ಸಂಬಂಧಗಳು ಒಟ್ಟಾಗಿ ದೊಡ್ಡ ಸಾಮಾಜಿಕ ಶಕ್ತಿಯಾಗುತ್ತವೆ. ಒಬ್ಬರ ನೋವಿಗೆ ಮತ್ತೊಬ್ಬರು ಸ್ಪಂದಿಸಿದಾಗ, ಒಬ್ಬರ ಯಶಸ್ಸಿಗೆ ಮತ್ತೊಬ್ಬರು ಸಂತೋಷಪಟ್ಟಾಗ, ತಪ್ಪು ಮಾಡಿದಾಗ ತಿದ್ದಿದಾಗ, ದುರ್ಬಲರಿಗೆ ಬೆಂಬಲ ನೀಡಿದಾಗ ಸಮಾಜದಲ್ಲಿ ನಂಬಿಕೆಯ ವಾತಾವರಣ ನಿರ್ಮಾಣವಾಗುತ್ತದೆ. ಹೀಗಾಗಿ ರಕ್ಷಾ ಬಂಧನವನ್ನು ಕೇವಲ ಒಂದು ದಿನದ ಹಬ್ಬವಾಗಿ ನೋಡದೆ, ಬದುಕಿನ ಮೌಲ್ಯಗಳನ್ನು ಪುನರುಚ್ಚರಿಸುವ ದಿನವನ್ನಾಗಿ ಆಚರಿಸೋಣ. ಅಣ್ಣ-ತಂಗಿ, ಅಕ್ಕ-ತಮ್ಮನ ಪ್ರೀತಿ ಶಾಶ್ವತವಾಗಿರಲಿ. ರಕ್ತಸಂಬಂಧದಾಚೆಗೂ ಮಾನವೀಯ ಸಂಬಂಧಗಳು ವಿಸ್ತರಿಸಲಿ. ಮಹಿಳೆಯರಿಗೆ ಗೌರವ ಮತ್ತು ಸುರಕ್ಷತೆ ದೊರೆಯಲಿ. ಮಕ್ಕಳು ಪ್ರೀತಿ ಮತ್ತು ಸಂಸ್ಕಾರದೊಂದಿಗೆ ಬೆಳೆಯಲಿ. ಕುಟುಂಬಗಳಲ್ಲಿ ಭಾವನಾತ್ಮಕ ಭದ್ರತೆ ಹೆಚ್ಚಲಿ. ಸಮಾಜದಲ್ಲಿ ಪರಸ್ಪರ ಸಹಕಾರ, ಶಾಂತಿ ಮತ್ತು ವಿಶ್ವಬಂಧುತ್ವ ಬೆಳೆದುಬರಲಿ. ಪ್ರಕೃತಿ ಮತ್ತು ಮುಂದಿನ ಪೀಳಿಗೆಯ ಬದುಕನ್ನೂ ರಕ್ಷಿಸುವ ಸಂಕಲ್ಪ ನಮ್ಮದಾಗಲಿ. ರಾಖಿಯ ದಾರ ಕೈಗೆ ಕಟ್ಟಲ್ಪಡುವುದು ಕೆಲವೇ ಕ್ಷಣಗಳ ವಿಚಾರ; ಆದರೆ ಅದರ ಸಂದೇಶ ಮನಸ್ಸಿಗೆ ಕಟ್ಟಿಕೊಂಡರೆ ಅದು ಜೀವನಪೂರ್ತಿ ಉಳಿಯುವ ಮೌಲ್ಯವಾಗುತ್ತದೆ. ಪ್ರೀತಿಯ ನೂಲಿನಲ್ಲಿ ಮಾನವೀಯತೆಯನ್ನು ಹೆಣೆದು, ಗೌರವದ ಬಂಧನದಲ್ಲಿ ಸಮಾಜವನ್ನು ಜೋಡಿಸಿ, ಪರಸ್ಪರ ಹೊಣೆಗಾರಿಕೆಯ ಮೂಲಕ ಉತ್ತಮ ಬದುಕಿನತ್ತ ಸಾಗುವುದೇ ರಕ್ಷಾ ಬಂಧನದ ನಿಜವಾದ ವೈಚಾರಿಕ ಆಶಯ.

**ರಕ್ಷಾ ಬಂಧನ ಸರ್ವರಿಗೂ ಹಾರ್ದಿಕ ಶುಭಕಾಮನೆಗಳು.**



ಸಂಗಮೇಶ ಎನ್ ಜವಾದಿ,
ಬರಹಗಾರರು, ಪರಿಸರ ಸಂರಕ್ಷಕರು,
ಹೋರಾಟಗಾರರು, ಬೀದರ್ ಜಿಲ್ಲೆ.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಅರಣ್ಯಭವನ ತಲುಪಿದ ದಸರಾ ಆನೆಗಳು, ಇಂದು ಅರಮನೆ ಪ್ರವೇಶ



ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ ಮೊದಲ ಹಂತದ ಗಜಪಡೆ ನಗರದ ಅರಣ್ಯಭವನ ತಲುಪಿದ್ದು, ನಾಳೆ ಅರಮನೆ ಪ್ರವೇಶಿಸಲಿದೆ.ಹುಣಸೂರು ತಾಲ್ಲೂಕಿನ ವೀರನಹೊಸಳ್ಳಿ ಗೇಟ್‌ನಿಂದ ನಿನ್ನೆ ಅದ್ದೂರಿಯಾಗಿ ಗಜಪಯಣಕ್ಕೆ ಚಾಲನೆ ನೀಡಲಾಗಿತ್ತು. ಸಂಜೆ ವೇಳೆಗೆ ಆನೆಗಳು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿ, ಅರಣ್ಯಭವನದಲ್ಲಿ ವಿಶ್ರಾಂತಿ ಪಡೆದವು.

ನಾಳೆ ಬೆಳಿಗ್ಗೆ 10 ಗಂಟೆಗೆ ಮಹೇಂದ್ರ, ಧನಂಜಯ, ಏಕಲವ್ಯ, ಗೋಪಿ, ಶ್ರೀರಾಮ, ಪ್ರಶಾಂತ, ಶ್ರೀಕಂಠ, ಲಕ್ಷ್ಮಿ ಹಾಗೂ ಕಾವೇರಿ ಆನೆಗಳು ಅರಮನೆ ಪ್ರವೇಶಿಸಲಿವೆ. ಆನೆಗಳ ಸ್ವಾಗತಕ್ಕೆ ಜಿಲ್ಲಾಡಳಿತ, ಅರಮನೆ ಆಡಳಿತ ಹಾಗೂ ಅರಣ್ಯ ಇಲಾಖೆ ವತಿಯಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಗಜಪಡೆಗಳಿಗೆ ಪೂಜೆ ಸಲ್ಲಿಸಿ ಅದ್ದೂರಿಯಾಗಿ ಸ್ವಾಗತಿಸಲಾಗುವುದು. ಅರಮನೆ ಪ್ರವೇಶದ ಬಳಿಕ ಆನೆಗಳಿಗೆ ವಿಶೇಷ ಆರೈಕೆ ನೀಡಲಾಗುವುದಲ್ಲದೆ, ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಅಗತ್ಯವಾದ ತರಬೇತಿಯನ್ನೂ ನೀಡಲಾಗುವುದು.

**ಸುಗ್ರೀವನ ಬದಲು ಶ್ರೀಕಂಠ**

ದುಬಾರೆ ಸಾಕಾನೆ ಶಿಬಿರದ ಸುಗ್ರೀವ ಆನೆಯು ಕೊಡಗಿನಲ್ಲಿ ನಡೆದ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರಿಂದ ವಿಶ್ರಾಂತಿಯ ಅಗತ್ಯವಿದೆ. ಹೀಗಾಗಿ ಸುಗ್ರೀವನ ಬದಲಿಗೆ ಮತ್ತಿಗೂಡು ಶಿಬಿರದ ಶ್ರೀಕಂಠನನ್ನು ಮೊದಲ ತಂಡಕ್ಕೆ ಆಯ್ಕೆ ಮಾಡಿ ಮೈಸೂರಿಗೆ ಕರೆತರಲಾಗಿದೆ. ಎರಡನೇ ಹಂತದಲ್ಲಿ ಸುಗ್ರೀವ ಮೈಸೂರಿಗೆ ಆಗಮಿಸಲಿದ್ದಾನೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಸತತ ಆರು ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದ ಅಭಿಮನ್ಯು ನಿವೃತ್ತಿಯಾದ ಹಿನ್ನೆಲೆಯಲ್ಲಿ, ನಿನ್ನೆ ವೀರನಹೊಸಳ್ಳಿಯಲ್ಲಿ ಅದ್ದೂರಿಯಾಗಿ ಬೀಳ್ಕೊಡಲಾಯಿತು. ಈ ಬಾರಿ ಚಿನ್ನದ ಅಂಬಾರಿ ಹೊರುವ ಅದೃಷ್ಟ ಯಾವ ಆನೆಗೆ ಒಲಿಯಲಿದೆ ಎಂಬುದು ಸಾರ್ವಜನಿಕರಲ್ಲಿ ಕುತೂಹಲ ಮೂಡಿಸಿದೆ. ಆನೆಗಳಿಗೆ ತಾಲೀಮು ನೀಡಿದ ಬಳಿಕ ಚಿನ್ನದ ಅಂಬಾರಿ ಹೊರುವ ಆನೆ ಹಾಗೂ ಅದರ ಸಾರಥಿಯನ್ನು ಅಂತಿಮವಾಗಿ ನಿರ್ಧರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

## ನೇಪಾಳ ಪ್ರವಾಹ ದುರಂತ : ನಾಪತ್ತೆಯಾದ ಕನ್ನಡಿಗರ ಮಾಹಿತಿ ನೀಡಲು ಸರ್ಕಾರ ಮನವಿ, ಸಹಾಯವಾಣಿ ಆರಂಭ

ಬೆಂಗಳೂರು: ನೇಪಾಳದಲ್ಲಿ ಸಂಭವಿಸಿದ ಪ್ರಕೃತಿ ವಿಕೋಪ ಹಾಗೂ ದಿಢೀರ್ ಪ್ರವಾಹದ ಹಿನ್ನೆಲೆಯಲ್ಲಿ ಕರ್ನಾಟಕ ಮೂಲದ ಪ್ರವಾಸಿಗರು ಅಥವಾ ನಾಗರಿಕರು ಯಾರಾದರೂ ನಾಪತ್ತೆಯಾಗಿದ್ದರೆ ಅಥವಾ ಸಂಪರ್ಕಕ್ಕೆ ಸಿಗದೇ ಇದ್ದರೆ, ತಕ್ಷಣವೇ ಅವರ ವಿವರಗಳನ್ನು ಒದಗಿಸುವಂತೆ ರಾಜ್ಯ ಸರ್ಕಾರ ಸಾರ್ವಜನಿಕರಲ್ಲಿ ಮನವಿ ಮಾಡಿದೆ.



ಕೇಂದ್ರ ಗೃಹ ಸಚಿವಾಲಯ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ರಾಜ್ಯ ಸರ್ಕಾರ ಸತತ ಸಂಪರ್ಕದಲ್ಲಿದ್ದು, ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ಒದಗಿಸುವುದು ಹಾಗೂ ನಾಪತ್ತೆಯಾದವರನ್ನು ಪತ್ತೆಹಚ್ಚಲು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುತ್ತಿದೆ. ನೇಪಾಳದಲ್ಲಿ ತಮ್ಮ ಕುಟುಂಬಸ್ಥರು, ಸ್ನೇಹಿತರು ಅಥವಾ ಪರಿಚಿತರು ನಾಪತ್ತೆಯಾಗಿದ್ದಾರೆಂದು ಶಂಕೆ ಇದ್ದರೆ, ಸಾರ್ವಜನಿಕರು ನಾಪತ್ತೆಯಾದ ವ್ಯಕ್ತಿಯ ಪೂರ್ಣ ಹೆಸರು, ಮೊಬೈಲ್ ಸಂಖ್ಯೆ, ಕೊನೆಯದಾಗಿ ಸಂಪರ್ಕಿಸಿದ ಸ್ಥಳ ಮತ್ತು ಸಮಯ ಹಾಗೂ ಖಾಯಂ ವಿಳಾಸದ ವಿವರಗಳನ್ನು ತಕ್ಷಣವೇ ಸರ್ಕಾರಕ್ಕೆ ಒದಗಿಸುವಂತೆ ಕೋರಲಾಗಿದೆ. ಈ ವಿವರಗಳನ್ನು ಸಲ್ಲಿಸಲು ರಾಜ್ಯ ಸರ್ಕಾರ ವಿಶೇಷ ಗೂಗಲ್ ಫಾರ್ಮ್ ವ್ಯವಸ್ಥೆ ಮಾಡಿದ್ದು, ಅದರ ಮೂಲಕ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ. ಸಂತ್ರಸ್ತರು ಹಾಗೂ ಅವರ ಕುಟುಂಬಸ್ಥರ ನೆರವಿಗಾಗಿ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ (ಎಸ್‌ಇಒಸಿ) 24 ಗಂಟೆಯೂ ಸಹಾಯವಾಣಿ ತೆರೆದಿದೆ. ಸಾರ್ವಜನಿಕರು 1070 (ಟೋಲ್ ಫ್ರೀ) ಅಥವಾ 080-22253707 ಸಂಖ್ಯೆಗೆ ಕರೆ ಮಾಡಬಹುದು. ಇ-ಮೇಲ್ ಮೂಲಕವೂ ಮಾಹಿತಿ ನೀಡಬಹುದಾಗಿದೆ. ಅಲ್ಲದೆ, ನೇಪಾಳದಲ್ಲಿ ಸಿಲುಕಿರುವ ಭಾರತೀಯರಿಗೆ ತುರ್ತು ನೆರವು ಒದಗಿಸಲು ಅಲ್ಲಿನ ಭಾರತೀಯ ರಾಯಭಾರ ಕಚೇರಿ ತುರ್ತು ವಾಟ್ಸ್ಆ?ಯಪ್ ಹಾಗೂ ಕರೆ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಸಾರ್ವಜನಿಕರು +977 9851316807, +977 9709107500 ಅಥವಾ +977 9810326117 ಸಂಖ್ಯೆಗೆ ನೇರವಾಗಿ ಕರೆ ಮಾಡಬಹುದು ಅಥವಾ ವಾಟ್ಸ್ಆ?ಯಪ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಹಾಗೂ ನೆರವು ಕೋರಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಪಾಕಿಸ್ತಾನಿ ಉಗ್ರರ ಲಿಂಕ್ : ಉತ್ತರ ಪ್ರದೇಶದಲ್ಲಿ 150ಕ್ಕೂ ಹೆಚ್ಚು ಮಂದಿಯ ವಿಚಾರಣೆ

ಲಖ್ನೋ: ಉತ್ತರ ಪ್ರದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿರುವ ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ (ಯುಪಿ ಎಟಿಎಸ್), ಪಾಕಿಸ್ತಾನದ ಭಯೋತ್ಪಾದಕ ಜಾಲದೊಂದಿಗೆ ಸಂಪರ್ಕ ಹೊಂದಿರುವ ಶಂಕೆಯ ಮೇರೆಗೆ 150ಕ್ಕೂ ಹೆಚ್ಚು ಮಂದಿಯನ್ನು ಗಂಭೀರವಾಗಿ ವಿಚಾರಣೆ ನಡೆಸುತ್ತಿದೆ.

ಕಳೆದ ನಾಲ್ಕು ತಿಂಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಂಧಿಸಲಾದ 52 ಶಂಕಿತರನ್ನು ಕೂಲಂಕಷವಾಗಿ ವಿಚಾರಣೆ ನಡೆಸಿದ ಬಳಿಕ ಎಟಿಎಸ್ ತನ್ನ ತನಿಖೆಯನ್ನು ರಾಜ್ಯಾದ್ಯಂತ ವಿಸ್ತರಿಸಿದೆ. ಬಂಧಿತ ಆರೋಪಿಗಳಿಂದ ದೊರೆತ ಸುಳಿವಿನ ಆಧಾರದ ಮೇಲೆ ಗುರುತಿಸಲಾದ 150ಕ್ಕೂ ಹೆಚ್ಚು ಶಂಕಿತರ ಪೈಕಿ ಈಗಾಗಲೇ 60ಕ್ಕೂ ಹೆಚ್ಚು ಮಂದಿಯನ್ನು ಎಟಿಎಸ್ ಅಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಬಂಧಿತರಲ್ಲಿ ಹಲವರು ಪಾಕಿಸ್ತಾನಿ ದರೋಡೆಕೋರ ಶಹಜಾದ್ ಭಟ್ಟಿ



ಮತ್ತು ಆತನ ಜಾಲದ ಸ್ಲೀಪರ್ ಸೆಲ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂಬುದು ಎಟಿಎಸ್‌ನ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ ಶಂಕಿತರ ವಿಚಾರಣೆಯಲ್ಲಿ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಸ್ಫೋಟ ನಡೆಸಲು ಸಂಚು ರೂಪಿಸುವುದು, ಬೆಂಕಿ ಹಚ್ಚುವ ಮೂಲಕ ಭಯದ ವಾತಾವರಣ ಸೃಷ್ಟಿಸುವುದು ಹಾಗೂ ಪಾಕಿಸ್ತಾನಿ ದರೋಡೆಕೋರರ ಪೋಸ್ಟರ್‌ಗಳನ್ನು ಅಂಟಿಸುವಂತಹ ದೇಶವಿರೋಧಿ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಗಳು ಬೆಳಕಿಗೆ ಬಂದಿವೆ. ಶಂಕಿತರಿಗೂ ಪಾಕಿಸ್ತಾನದ ಉಗ್ರ ಜಾಲಕ್ಕೂ ನೇರ ಅಥವಾ ಪರೋಕ್ಷ ಸಂಪರ್ಕವಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಎಟಿಎಸ್ ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದೆ. ಶಂಕಿತರ ಸಾಮಾಜಿಕ ಮಾಧ್ಯಮ ಖಾತೆಗಳು, ಚಾಟ್‌ಗಳು ಹಾಗೂ ಡಿಜಿಟಲ್ ಸಂವಹನಗಳನ್ನು ವಿಶೇಷ ತಜ್ಞರ ತಂಡ ವಿಶ್ಲೇಷಿಸುತ್ತಿದೆ. ಬಂಧಿತರೊಂದಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕದಲ್ಲಿದ್ದ ಎರಡು ಡಜನ್‌ಗೂ ಹೆಚ್ಚು ಮಂದಿಯನ್ನು ಪ್ರತ್ಯೇಕವಾಗಿ ಗುರುತಿಸಲಾಗಿದ್ದು, ಅವರ ಚಟುವಟಿಕೆಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ.ಶಂಕಿತರ ಬ್ಯಾಂಕಿಂಗ್ ವಹಿವಾಟುಗಳು ಹಾಗೂ ಆರ್ಥಿಕ ಮೂಲಗಳ ಬಗ್ಗೆಯೂ ತನಿಖೆ ಮುಂದುವರಿದಿದೆ. ಭಯೋತ್ಪಾದಕ ಚಟುವಟಿಕೆಗಳಿಗೆ ವಿದೇಶಿ ಮೂಲಗಳಿಂದ ಹಣ ಹರಿದುಬಂದಿದೆಯೇ ಎಂಬ ಬಗ್ಗೆಯೂ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ.

**ಕೇಂದ್ರ ಸಂಸ್ಥೆಗಳ ನೆರವು**

ಈ ಜಾಲವು ರಾಜ್ಯದ ಗಡಿಗಳನ್ನು ಮೀರಿ ವ್ಯಾಪಿಸಿರುವ ಸಾಧ್ಯತೆಯ ಹಿನ್ನೆಲೆಯಲ್ಲಿ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಲು ಎಟಿಎಸ್ ಕೇಂದ್ರ ತನಿಖಾ ಸಂಸ್ಥೆಗಳ ಸಹಕಾರವನ್ನೂ ಪಡೆಯುತ್ತಿದೆ. 150ಕ್ಕೂ ಹೆಚ್ಚು ಶಂಕಿತರ ಪೈಕಿ ಯಾರಿಗೆ ನೇರ ಸಂಪರ್ಕವಿದೆ, ಅವರ ಪಾತ್ರವೇನು ಎಂಬುದನ್ನು ಪತ್ತೆಹಚ್ಚಿ, ಸಾಕ್ಷ್ಯಗಳ ಆಧಾರದ ಮೇಲೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲು ಎಟಿಎಸ್ ಸಿದ್ಧತೆ ನಡೆಸಿದೆ.

# ಟಿಬೆಟ್ ಪ್ರವಾಹ : ಕೈಲಾಸ ಯಾತ್ರೆಗೆ ತೆರಳಿದ್ದ ಇಶಾ ಫೌಂಡೇಶನ್‌ನ 77 ಮಂದಿ ನಾಪತ್ತೆ

ನವದೆಹಲಿ: ನೇಪಾಳದ ಗಡಿಗೆ ಹೊಂದಿಕೊಂಡಿರುವ ಟಿಬೆಟ್‌ನ ಪ್ರವಾಹಪೀಡಿತ ಗ್ಯೆರಾಂಗ್ ಪಟ್ಟಣದಲ್ಲಿ ಸಂಭವಿಸಿದ ಭೀಕರ ದುರಂತದಲ್ಲಿ ಇಶಾ ಫೌಂಡೇಶನ್‌ನ ಕೈಲಾಸ ಯಾತ್ರೆಗೆ ತೆರಳಿದ್ದ ಯಾತ್ರಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬುಧವಾರ ಸಂಭವಿಸಿದ ಹಠಾತ್ ಪ್ರವಾಹದ ವೇಳೆ ಕೈಲಾಸ ಮಾನಸ ಸರೋವರ ಯಾತ್ರೆ ಮುಗಿಸಿ ವಾಪಸಾಗುತ್ತಿದ್ದ 77 ಯಾತ್ರಿಕರು ಗ್ಯೆರಾಂಗ್‌ನ ವಲಸೆ ಕೇಂದ್ರದಲ್ಲಿದ್ದರು. ಈ ವೇಳೆ ಕಟ್ಟಡದೊಳಗೆ ಪ್ರವಾಹದ ನೀರು ನುಗ್ಗಿದ್ದರಿಂದ ಭಾರೀ ಅನಾಹುತ ಸಂಭವಿಸಿದೆ ಎಂದು ವರದಿಯಾಗಿದೆ. ಪ್ರವಾಹದ ತೀವ್ರತೆಯಿಂದಾಗಿ ಸುಮಾರು 80 ಮಂದಿ ನಾಪತ್ತೆಯಾಗಿರುವ ಶಂಕೆ ವ್ಯಕ್ತವಾಗಿದ್ದು, ಅವರ ಸ್ಥಿತಿಗತಿ ಕುರಿತು ಇದುವರೆಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಗುರು ಹಾಗೂ ಇಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರು ಚೀನಾ ಸರ್ಕಾರದ ಅಧಿಕಾರಿಗಳಿಗೆ ತುರ್ತು ಮನವಿ ಮಾಡಿದ್ದಾರೆ.

ತಮ್ಮ ಅಧಿಕೃತ ಸಂದೇಶದಲ್ಲಿ ನೋವು ವ್ಯಕ್ತಪಡಿಸಿರುವ ಸದ್ಗುರು, ಗ್ಯೆರಾಂಗ್‌ನ ಪ್ರವಾಹದಲ್ಲಿ ತಮ್ಮ ಗುಂಪಿನವರು ಸಿಲುಕಿರುವ ಬಗ್ಗೆ ತಿಳಿದು ತೀವ್ರ ಆಘಾತವಾಗಿದೆ. ಪ್ರವಾಹದ ಬಳಿಕ ಅವರ ಕುರಿತು ಯಾವುದೇ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ. ಸಂತ್ರಸ್ತರ ಕುಟುಂಬಗಳೊಂದಿಗೆ ತಾವೂ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಗಳಲ್ಲಿ ನೆರವಾಗಲು ಅವಕಾಶ ನೀಡುವಂತೆ ಅವರು ಚೀನಾ ಅಧಿಕಾರಿಗಳನ್ನು ಕೋರಿದ್ದಾರೆ. ಸ್ಥಳೀಯ ರಕ್ಷಣಾ ಪಡೆಗಳ ಕಾರ್ಯಾಚರಣೆಗೆ ಯಾವುದೇ ರೀತಿಯ ಅಡ್ಡಿಪಡಿಸುವುದಿಲ್ಲ. ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಲು ಹಾಗೂ ಹುಡುಕಾಟ ಕಾರ್ಯದಲ್ಲಿ ಕೈಜೋಡಿಸಲು ಮಾತ್ರ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ.

**77 ಯಾತ್ರಿಕರು, ಮೂವರು ಸ್ವಯಂಸೇವಕರು**

ದುರಂತ ಸಂಭವಿಸಿದ ಸಂದರ್ಭದಲ್ಲಿ ಇಶಾ ಫೌಂಡೇಶನ್‌ನ ಕೈಲಾಸ ಮಾನಸ ಸರೋವರ ಯಾತ್ರಾ ತಂಡದ 77 ಯಾತ್ರಿಕರು ಹಾಗೂ ಮೂವರು ಸ್ವಯಂಸೇವಕರು ಸೇರಿ ಸುಮಾರು 80 ಮಂದಿ ಗ್ಯೆರಾಂಗ್‌ನ ವಲಸೆ ಕೇಂದ್ರದಲ್ಲಿದ್ದರು ಎಂದು ಸದ್ಗುರು ತಿಳಿಸಿದ್ದಾರೆ. ಕೈಲಾಸ ಯಾತ್ರೆಯಿಂದ ವಾಪಸಾಗುತ್ತಿದ್ದ ತಂಡ ಗ್ಯೆರಾಂಗ್‌ನ ವಲಸೆ ಕೇಂದ್ರದಲ್ಲಿದ್ದಾಗ ಏಕಾಏಕಿ ಪ್ರವಾಹದ ನೀರು ಕಟ್ಟಡದೊಳಗೆ ನುಗ್ಗಿದೆ. ಬಳಿಕ ಸಂಪರ್ಕ ವ್ಯವಸ್ಥೆಗಳು ಕಡಿತಗೊಂಡಿದ್ದರಿಂದ ಅವರ ಸ್ಥಿತಿಗತಿ ಕುರಿತು ತಕ್ಷಣ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಲಿಲ್ಲ. ಇದರಿಂದ ಯಾತ್ರಿಕರ ಕುಟುಂಬಗಳಲ್ಲಿ ಆತಂಕ ಹೆಚ್ಚಾಗಿದೆ. ಗ್ಯೆರಾಂಗ್‌ಗೆ ತಾವೂ ಹಾಗೂ ಸ್ವಯಂಸೇವಕರ ಸಣ್ಣ ತಂಡವೊಂದೂ ತೆರಳಲು ಅವಕಾಶ ನೀಡುವಂತೆ ಸದ್ಗುರು ಚೀನಾ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ರಕ್ಷಣಾ ಕಾರ್ಯಾಚರಣೆಗೆ



ಯಾವುದೇ ರೀತಿಯಲ್ಲಿ ಅಡ್ಡಿಯಾಗುವುದಿಲ್ಲ. ಬದಲಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ಕೈಜೋಡಿಸಿ ಕಾಣೆಯಾದವರನ್ನು ಪತ್ತೆಹಚ್ಚಲು ಹಾಗೂ ಅವರ ಕುಟುಂಬಗಳಿಗೆ ನೆರವಾಗಲು ಬಯಸುವುದಾಗಿ ತಿಳಿಸಿದ್ದಾರೆ.

ತಮ್ಮ ಯಾತ್ರಾ ತಂಡದ ಸದಸ್ಯರ ಕುರಿತು ಯಾವುದೇ ಖಚಿತ ಮಾಹಿತಿ ಲಭ್ಯವಾಗದಿರುವುದು ಅತ್ಯಂತ ನೋವಿನ ಸಂಗತಿ ಎಂದು ಸದ್ಗುರು ಹೇಳಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡಿರುವುದಾಗಿ ತಿಳಿಸಿರುವ ಅವರು, ರಕ್ಷಣಾ ತಂಡಗಳ ಕಾರ್ಯಕ್ಕೆ ಗೌರವ ನೀಡುವುದಾಗಿ ಹಾಗೂ ಅವರ ಕಾರ್ಯಾಚರಣೆಗೆ ಅಡ್ಡಿಯಾಗದ ರೀತಿಯಲ್ಲಿ ನೆರವು ನೀಡಲು ಸಿದ್ಧರಿರುವುದಾಗಿ ತಿಳಿಸಿದ್ದಾರೆ.

**495 ಮಂದಿ ಸುರಕ್ಷಿತವಾಗಿ ವಾಪಸ್**

ಇಶಾ ಫೌಂಡೇಶನ್‌ನ ಯಾತ್ರಾ ತಂಡಗಳಿಗೆ ಸಂಬಂಧಿಸಿದ ಲಭ್ಯ ಮಾಹಿತಿಯ ಪ್ರಕಾರ, 21 ಗುಂಪುಗಳ ಪೈಕಿ 495 ಮಂದಿ ಸುರಕ್ಷಿತವಾಗಿ ವಾಪಸಾಗಿದ್ದಾರೆ. ಇನ್ನೂ 743 ಮಂದಿ ಟಿಬೆಟ್‌ನಲ್ಲಿದ್ದು, 148 ಮಂದಿ ನೇಪಾಳದಲ್ಲಿದ್ದರು. ಆದರೆ ಗ್ಯೆರಾಂಗ್‌ನ ವಲಸೆ ಕೇಂದ್ರದಲ್ಲಿದ್ದ 77 ಯಾತ್ರಿಕರ ಕುರಿತು ತಕ್ಷಣದ ಮಾಹಿತಿ ಲಭ್ಯವಾಗಿರಲಿಲ್ಲ. ಸದ್ಯ ಚೀನಾ ಹಾಗೂ ಸ್ಥಳೀಯ ಆಡಳಿತದ ರಕ್ಷಣಾ ಮತ್ತು ಶೋಧ ಕಾರ್ಯಾಚರಣೆಗಳು ಮುಂದುವರಿದಿವೆ. ನಾಪತ್ತೆಯಾಗಿರುವ ಯಾತ್ರಿಕರ ಸುರಕ್ಷತೆಗಾಗಿ ಕುಟುಂಬಸ್ಥರು ಆತಂಕದಿಂದ ಕಾಯುತ್ತಿದ್ದು, ರಕ್ಷಣಾ ಕಾರ್ಯಾಚರಣೆ ತ್ವರಿತಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

# ನೇಪಾಳ ಜಲಪ್ರಳಯದಲ್ಲಿ 300ಕ್ಕೂ ಅಧಿಕ ಭಾರತೀಯರು ನಾಪತ್ತೆ ; 160ಕ್ಕೂ ಹೆಚ್ಚು ಸಾವು

ಕಠ್ಮಂಡು: ನೇಪಾಳದಲ್ಲಿ ಬುಧವಾರ ಸಂಭವಿಸಿದ ಹಠಾತ್ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಕನಿಷ್ಠ 160ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ನಾಪತ್ತೆಯಾದವರಲ್ಲಿ 300ಕ್ಕೂ ಅಧಿಕ ಭಾರತೀಯರು ಸೇರಿದ್ದಾರೆ ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ತಿಳಿಸಿದ್ದಾರೆ.

ಕಠ್ಮಂಡುವಿನಲ್ಲಿ ನಡೆದ ವಿಶ್ವ ಅನ್ವೇಷಣಾ ಶೃಂಗಸಭೆಯಲ್ಲಿ ಮಾತನಾಡಿದ ಶಿಶಿರ್ ಖನಾಲ್, ನಾಪತ್ತೆಯಾಗಿರುವ ಸಾವಿರಾರು ಜನರಲ್ಲಿ ಕನಿಷ್ಠ 300 ಭಾರತೀಯ ಪ್ರಜೆಗಳಿದ್ದು, ಅವರಲ್ಲಿ ಹೆಚ್ಚಿನವರು ಕೈಲಾಸ ಮಾನಸ ಸರೋವರ ಯಾತ್ರಿಕರು ಎಂದು ತಿಳಿಸಿದ್ದಾರೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿರುವ ಅವರೊಂದಿಗೆ ಸಂಪರ್ಕ ಸಾಧಿಸಲು ನೇಪಾಳ ಸರ್ಕಾರ ನಿರಂತರ ಪ್ರಯತ್ನ ನಡೆಸುತ್ತಿದೆ ಎಂದಿದ್ದಾರೆ. ರಸುವಾ ಪ್ರದೇಶದಲ್ಲಿ ಸಂಭವಿಸಿದ ಈ ದುರಂತದಲ್ಲಿ ಈವರೆಗೆ 160ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಾರು ಕುಟುಂಬಗಳು ನೆಲೆ ಕಳೆದುಕೊಂಡಿವೆ. ನಾಪತ್ತೆಯಾಗಿರುವ ವಿದೇಶಿ ಪ್ರಜೆಗಳ ಸುರಕ್ಷತೆಗಾಗಿ ನೇಪಾಳ



ಸರ್ಕಾರ ಆಯಾ ದೇಶಗಳ ರಾಯಭಾರ ಕಚೇರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತ ಸರ್ಕಾರ ಕಳುಹಿಸಿರುವ ತ್ವರಿತ ಪರಿಹಾರ ಸಾಮಗ್ರಿಗಳು ಹಾಗೂ ನೆರವಿಗೆ ನೇಪಾಳ ಸರ್ಕಾರ ಧನ್ಯವಾದ ಸಲ್ಲಿಸಿದೆ. ಹಿಮಾಲಯ ರಾಷ್ಟ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿದ ಅತ್ಯಂತ ಭೀಕರ ಪ್ರಕೃತಿ ವಿಕೋಪಗಳಲ್ಲಿ ಇದೂ ಒಂದಾಗಿದ್ದು, 2015ರ ಭೀಕರ ಭೂಕಂಪದ ದುಃಖದಿಂದ ಚೇತರಿಸಿಕೊಳ್ಳುತ್ತಿರುವ ನೇಪಾಳಕ್ಕೆ ಈ ಪ್ರವಾಹ ಮತ್ತೊಂದು ದೊಡ್ಡ ಆಘಾತ ನೀಡಿದೆ.

**ಪ್ರವಾಸಿಗರಿಗೆ ಸುರಕ್ಷಿತ**

"ನಮ್ಮ ಪ್ರಮುಖ ಗಮನ ಸದ್ಯ ರಕ್ಷಣೆ ಮತ್ತು ತಕ್ಷಣದ ಪರಿಹಾರದ ಮೇಲೆಯೇ ಇದೆ. ಪೋಖರಾ ಹಾಗೂ ಮೌಂಟ್ ಎವರೆಸ್ಟ್‌ನಂತಹ ಪ್ರಮುಖ ಪ್ರವಾಸಿ ತಾಣಗಳು ಪ್ರವಾಹದಿಂದ ಪ್ರಭಾವಿತವಾಗಿಲ್ಲ. ಅವು ಪ್ರವಾಸಿಗರಿಗೆ ಸಂಪೂರ್ಣ ಸುರಕ್ಷಿತವಾಗಿವೆ" ಎಂದು ಶಿಶಿರ್ ಖನಾಲ್ ತಿಳಿಸಿದ್ದಾರೆ. ನೇಪಾಳದ ಆರ್ಥಿಕ ಚೇತರಿಕೆಗೆ ಪ್ರವಾಸೋದ್ಯಮ ಪ್ರಮುಖ ಆಧಾರವಾಗಿರುವುದರಿಂದ, ಪ್ರವಾಸಿಗರು ಎಂದಿನಂತೆ ನೇಪಾಳಕ್ಕೆ ಭೇಟಿ ನೀಡಿ ಪುನರ್‌ನಿರ್ಮಾಣ ಕಾರ್ಯಕ್ಕೆ ಬೆಂಬಲ ನೀಡಬೇಕು ಎಂದು ಅವರು ಜಾಗತಿಕ ಸಮುದಾಯಕ್ಕೆ ಮನವಿ ಮಾಡಿದ್ದಾರೆ.

**ರಕ್ಷಣಾ ಕಾರ್ಯ ಚುರುಕು**

ಭಾರತ ಸರ್ಕಾರ ನವದೆಹಲಿಯಿಂದ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದು, ನಾಪತ್ತೆಯಾದ ಭಾರತೀಯರ ಪತ್ತೆಗಾಗಿ ನೇಪಾಳದ ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ. ಸಾವಿರಾರು ಕುಟುಂಬಗಳು ಮನೆಗಳನ್ನು ಕಳೆದುಕೊಂಡಿದ್ದು, ಹಲವರು ನಾಪತ್ತೆಯಾಗಿದ್ದಾರೆ. ವಿಪತ್ತಿನ ಸಂಪೂರ್ಣ ಪ್ರಮಾಣ ಹಾಗೂ ಹಾನಿಯ ಅಂದಾಜು ಮಾಡಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ ಎಂದು ಶಿಶಿರ್ ಖನಾಲ್ ತಿಳಿಸಿದ್ದಾರೆ.

ಕೈಲಾಸ ಮಾನಸ ಸರೋವರ ಯಾತ್ರೆ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಪ್ರವಾಸೋದ್ಯಮ ಸಂದರ್ಭಗಳಲ್ಲಿ ಈ ಹಿಂದೆ ಸಂಭವಿಸಿದ ಪ್ರಕೃತಿ ವಿಕೋಪಗಳಲ್ಲಿ ಭಾರತೀಯರು ನಾಪತ್ತೆಯಾದ ಘಟನೆಗಳು ನಡೆದಿವೆ. ಇದೀಗ ಸಂಭವಿಸಿರುವ ದುರಂತವೂ ಅಂತಹ ಕಹಿ ನೆನಪುಗಳನ್ನು ಮರುಕಳಿಸಿದೆ. ಸಿಲುಕಿರುವವರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಹಾಗೂ ನಾಪತ್ತೆಯಾದವರನ್ನು ಪತ್ತೆಹಚ್ಚಲು ನೇಪಾಳ ಮತ್ತು ಭಾರತ ಎರಡೂ ದೇಶಗಳ ಆಡಳಿತಗಳು ಯುದ್ಧೋಪಾದಿಯಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ.

2015ರ ಭೀಕರ ಭೂಕಂಪದ ನಂತರ ನೇಪಾಳ ಧೈರ್ಯದಿಂದ ಚೇತರಿಸಿಕೊಂಡಂತೆ, ಈ ಪ್ರಕೃತಿ ವಿಕೋಪದಿಂದಲೂ ದೇಶವು ಹೊರಬಂದು ಪುನರ್‌ನಿರ್ಮಾಣ ಮಾಡಿಕೊಳ್ಳಲಿದೆ ಎಂದು ಶಿಶಿರ್ ಖನಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com